ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಟೆಸ್ಟ್ ಇತಿಹಾಸದಲ್ಲಿ ಒಂದೇ ಪಂದ್ಯದಲ್ಲಿ ದ್ವಿಶತಕ ಮತ್ತು ಶತಕ ಬಾರಿಸಿದ ಹತ್ತನೇ ಆಟಗಾರ ಎಂಬ ಗೌರವಕ್ಕೆ (ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯ) ನ್ಯೂಜಿಲೆಂಡ್‌ನ ಆಟಗಾರ ಡೆವಾನ್ ಕಾನ್ವೆ (227-100) ಪಾತ್ರರಾಗಿದ್ದಾರೆ.

22 ಡಿಸೆಂಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 280 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ನಿಂಬಾಫಲ ಮಹಾತ್ಮೆ » 2



ಪಾಕ್‌ಗೆ ಏಷ್ಯಾ ಕಪ್ ಚಾಂಪಿಯನ್ ಪಟ್ಟ » 3



ಮಲೆನಾಡು ಗಿಡ್ಡ ತಳಿ ಸಂರಕ್ಷಣೆಗೆ ಮುಂದಾದ ಯುವಕ » 4

# ತಮ್ಮ ವೈಫಲ್ಯ ಬಿಟ್ಟು ಕೇಂದ್ರದ ಮೇಲೆ ಬೊಟ್ಟು

## ಭೂಮಿ, ನೀರು, ವಿದ್ಯುತ್ ನೀಡದೇ ಕಾರ್ಖಾನೆ ಸ್ಥಾಪನೆ ಹೇಗೆ ಸಾಧ್ಯ | ರಾಜ್ಯ ಸರ್ಕಾರಕ್ಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನೆ

• ಪ್ರಜೋದಯ ವರದಿ

ಹಾಸನ: ರಾಜ್ಯ ಸರ್ಕಾರದ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಕೇಂದ್ರ ಸರ್ಕಾರದ ಮೇಲೆ ಬೊಟ್ಟು ಮಾಡಲಾಗುತ್ತಿದೆ. ಕೇಂದ್ರದ ಮನವೊಲಿಸಲು ರಾಜ್ಯ ಸರ್ಕಾರದ ಪಾತ್ರವೇನಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಪ್ರಶ್ನಿಸಿರು.

ಶಾಸಕ ಹೆಚ್.ಪಿ.ಸ್ವರೂಪ್ ಅವರ ನಿವಾಸದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಸಹಕಾರ ನೀಡದೆ ಕಾರ್ಖಾನೆಗಳನ್ನು ಸ್ಥಾಪಿಸಲು ಹೇಗೆ ಸಾಧ್ಯ. ಭೂಮಿ, ನೀರು, ವಿದ್ಯುತ್ ನೀಡಬೇಕಿರುವುದು ರಾಜ್ಯ ಸರ್ಕಾರ, ಇದ್ಯಾವುದನ್ನೂ ನೀಡದೆ ನಾನು ಏನು ಮಾಡಲು ಆಗುತ್ತದೆ ಎಂದು ಪ್ರಶ್ನಿಸಿದರು.

**ಕುಹಕ ಮಾತುಗಳನ್ನು ನಿಲ್ಲಿಸಿ**

ಕುಮಾರಸ್ವಾಮಿ ಕೇಂದ್ರ ಸಚಿವರಾದರೂ ರಾಜ್ಯಕ್ಕೆ ಕಾರ್ಖಾನೆ ತರಲಿಲ್ಲವೆಂದು ಕೆಲ ಶಾಸಕರು ಆರೋಪ ಮಾಡಿ, ನಮ್ಮ ತಾಲ್ಲೂಕಿನಲ್ಲಿ 500 ಎಕರೆ, ನಮ್ಮ ತಾಲ್ಲೂಕಿನಲ್ಲಿ 300 ಎಕರೆ ಭೂಮಿ ನೀಡುವುದಾಗಿ ಮಾಧ್ಯಮಗಳಲ್ಲಿ ಹೇಳಿಕೆ ನೀಡುತ್ತಾರೆ. ಶಾಸಕರು ಹೇಗೆ ಜಮೀನು ಮಂಜೂರು ಮಾಡಲು ಸಾಧ್ಯವಾಗುತ್ತದೆ, ಎಲ್ಲಿಂದ ತಂದು ಕೊಡುತ್ತಾರೆಂದು ಪ್ರಶ್ನಿಸಿದ ಅವರು, ನಾನು ಮುಖ್ಯಮಂತ್ರಿಗೆ



ಪತ್ರಬರೆದರೂ ಇನ್ನೂ ನೀಡಿಲ್ಲ. ಆದ್ದರಿಂದ ಶಾಸಕರು ಕುಹಕ ಮಾತುಗಳನ್ನು ನಿಲ್ಲಿಸಬೇಕು. ರಾಜ್ಯ ಸರ್ಕಾರ ಸಹಕಾರ ನೀಡದಿದ್ದರೂ ಕೇಂದ್ರದ ನೆರವಿನಿಂದಲೇ ಪ್ರಾಮಾಣಿಕವಾಗಿ ರಾಜ್ಯಕ್ಕೆ ಕಾರ್ಖಾನೆಗಳನ್ನು ತರಲು ಶ್ರಮಿಸುವುದಾಗಿ ಭರವಸೆ ನೀಡಿದರು.

**ರೈತರಿಗೆ ಧೈರ್ಯ ತುಂಬುವ ಕೆಲಸವಾಗಿಲ್ಲ**

ಉತ್ತರ ಕರ್ನಾಟಕ ಭಾಗದಲ್ಲಿ ದೊಡ್ಡ ಪ್ರಮಾಣದ ಬೆಳೆ ಹಾನಿ ಸಂಭವಿಸಿದರೂ ರಾಜ್ಯ ಸರ್ಕಾರದ ಯಾವ ಸಚಿವರು ರೈತರಿಗೆ ಧೈರ್ಯ ತುಂಬುವ ಕೆಲಸ ಮಾಡಿಲ್ಲ. ಬೆಳೆ ಪರಿಹಾರ ನೀಡುವ ಬದಲು ಕೇಂದ್ರ ಸರ್ಕಾರ ಎಂಎಸ್‌ಪಿ ದರ ಘೋಷಣೆ ಮಾಡಿಲ್ಲವೆಂದು ಬೊಬ್ಬೆ ಹೊಡೆಯುತ್ತಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಹೊಂದಾಣಿಕೆಯಂತೆ ಕೇಂದ್ರ ನಿಗದಿ ಮಾಡಿದ ಎಂಎಸ್‌ಪಿ ದರದಲ್ಲಿ ಕೃಷಿ ಉತ್ಪನ್ನಗಳನ್ನು ರಾಜ್ಯ ಸರ್ಕಾರ ಖರೀದಿ ಮಾಡಬೇಕೆಂದು ತಿರುಗೇಟು ನೀಡಿದರು.

**ಪೊಳ್ಳು ಹೇಳಿಕೆ ನಿಲ್ಲಿಸಿ**

ರಾಜ್ಯದಲ್ಲಿ ಕಳೆದ ಎರಡೂವರೆ ವರ್ಷದ ಅವಧಿಯಲ್ಲಿ 2,800ಕ್ಕೂ ಹೆಚ್ಚು ರೈತರ ಆತ್ಮಹತ್ಯೆಯಾಗಿದೆ. ಪ್ರಕೃತಿ ವಿಕೋಪದಿಂದ 1 ಲಕ್ಷದ 2 ಸಾವಿರ ಕೋ.ರೂ. ನಷ್ಟ ಸಂಭವಿಸಿದೆ. ಆದರೆ, ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಅತಿವೃಷ್ಟಿಯಿಂದ ಆಗಿರುವ ನಷ್ಟಕ್ಕೆ ಪರಿಹಾರವಾಗಿ ರೈತರಿಗೆ 1 ಸಾವಿರ ಕೋ.ರೂ, ಮೂಲಭೂತ ಸೌಲಭ್ಯ ಕಲ್ಪಿಸಲು 300 ಕೋ. ರೂ. ನೀಡುವುದಾಗಿ ಹೇಳಿದ್ದಾರೆ. 1 ಸಾವಿರ ಕೋ.ರೂ. ನೀಡಿದರೆ ಯಾವುದಕ್ಕೆ ಸಾಲುತ್ತದೆ. ವೇದಿಕೆ ಮೇಲೆ ಪೊಳ್ಳು ಹೇಳಿಕೆಗಳನ್ನು ನೀಡುತ್ತಾ ಎಷ್ಟು ದಿನ ಕಾಲ ಕಳೆಯುತ್ತೀರಾ ಎಂದು ಪ್ರಶ್ನಿಸಿದರು.

**ಸಿದ್ದರಾಮಯ್ಯಗಿಂತ ಆರ್ಥಿಕ ತಜ್ಞರಿಲ್ಲ**

ಮಾರ್ಚ್-ಏಪ್ರಿಲ್ ತಿಂಗಳ ಗೃಹಲಕ್ಷ್ಮಿ ಹಣ ಜನರ ಖಾತೆಗೆ ಹಾಕದಿದ್ದರೂ ಮಹಿಳಾ ಮತ್ತು ಮಕ್ಕಳ ಸಚಿವೆ ಅಧಿವೇಶನಕ್ಕೆ ತಪ್ಪು ಲೆಕ್ಕ ನೀಡಿದರು. ಈ ಸಂಬಂಧ ಯಾವುದಾದರೂ ಅಧಿಕಾರಿಯನ್ನು ಅಮಾನತುಗೊಳಿಸಲಾಯಿತೇ ಅಥವಾ ಸಚಿವೆಯ ರಾಜೀನಾಮೆ ಪಡೆದುಕೊಂಡರೇ, 5 ಸಾವಿರ ಕೋ.ರೂ. ಚಿಕ್ಕ ಮೊತ್ತವಲ್ಲ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದನ್ನು ಸಮರ್ಥನೆ ಮಾಡಿಕೊಳ್ಳುತ್ತಾರೆ. ಅಮೇರಿಕಾದಲ್ಲೇ ಸಿದ್ದರಾಮಯ್ಯ ಅವರಂತಹ ಆರ್ಥಿಕ ತಜ್ಞರಿಲ್ಲ. ಅವರ ಕಾಲದಲ್ಲಿ 5 ಸಾವಿರ ಕೋ. ರೂ. ಎಲ್ಲಿ ಹೋಗಿದೆ ಎಂದು ಗೊತ್ತಿಲ್ಲದಾಗಿದೆ ಎಂದರೆ ಏನರ್ಥ ಎಂದು ಕೇಳಿದರು.

ಸಹಕಾರಿ ಬ್ಯಾಂಕ್‌ಗಳ ಮೂಲಕ ಈ ವರ್ಷ 34 ಲಕ್ಷ ರೈತರಿಗೆ 24 ಸಾವಿರ ಕೋ.ರೂ. ಸಾಲ ನೀಡುತ್ತೇವೆಂದು ಘೋಷಣೆ ಮಾಡಿದ್ದರು. ನವೆಂಬರ್ ತಿಂಗಳವರೆಗೆ 12 ಸಾವಿರ ಕೋ. ರೂ. ಸಾಲ ನೀಡಿರುವುದಾಗಿ ಹೇಳಿದ್ದಾರೆ. ಅದನ್ನೂ ನೇರವಾಗಿ ಹೊಸ ಸಾಲ ನೀಡಿಲ್ಲ, ಈ ಹಿಂದೆ ನೀಡಿದ್ದ ಸಾಲವನ್ನೇ ಪರುಪಾವತಿ ಹೆಸರಿನಲ್ಲಿ ಹೊಂದಾಣಿಕೆ ಮಾಡಿದ್ದಾರೆ. ಈಗ ಮಾತೆತ್ತಿದರೆ ಕೇಂದ್ರ ಸರ್ಕಾರ ನಾಬರ್ಡ್‌ನಿಂದ ನೀಡುತ್ತಿದ್ದ ಸಾಲವನ್ನು ಕಡಿತಗೊಳಿಸಿದ್ದಾರೆಂದು ಆರೋಪ ಮಾಡುತ್ತಾರೆ. ನಾನು ಮುಖ್ಯಮಂತ್ರಿಯಾಗಿದ್ದಾಗ ರೈತರ ಸಾಲ ಮನ್ನ ಮಾಡಿದೆ, ಶಾಸಕರಿಗೆ ನನ್ನ ಅವಧಿಯಲ್ಲಿ ಎಷು ಅನುದಾನ ನೀಡಿದ್ದೇ ಎಂಬುದನ್ನು ಮುಖ್ಯಮಂತ್ರಿ ಶ್ವೇತಪತ್ರ ಹೊರಡಿಸಲಿ ಎದು ಸವಾಲು ಹಾಕಿದರು.

ಶಾಸಕರಾದ ಸಿ.ಎನ್.ಬಾಲಕೃಷ್ಣ, ಹೆಚ್.ಪಿ.ಸ್ವರೂಪ್, ಮಾಜಿ ಶಾಸಕ ಕಲಿಂಗೇಶ್, ಮುಖಂಡರಾದ ಸ್ವಾಮಿಗೌಡ, ರಘುಗೌಡ ಮತ್ತಿತರರರು ಹಾಜರಿದ್ದರು.

**ನಿಮ್ಮಲ್ಲಿರುವ ನ್ಯೂನತೆಗೆ ಅನುದಾನ ಕಡಿತ**

ಮಾತು ಎತ್ತಿದರೆ ಕೇಂದ್ರ ಸರ್ಕಾರ ಭದ್ರಮೇಲ್ದಂಡೆ ಯೋಜನೆ ಹಣ ನೀಡುತ್ತಿಲ್ಲ, ಪೆರಿಫೆರಲ್ ರಿಂಗ್ ರಸ್ತೆಗೆ ಅನುದಾನ ನೀಡುತ್ತಿಲ್ಲ ಎನ್ನುತ್ತಾರೆ. ಕೇಂದ್ರ ಹಲವು ಯೋಜನೆಗಳಿಗೆ ಅನುದಾನ ನೀಡಿದರೂ ರಾಜ್ಯ ಸರ್ಕಾರ ಶಿಸ್ತುಬದ್ಧವಾದ, ಗುಣಾತ್ಮಕ ಕೆಲಸಗಳನ್ನು ಮಾಡಿಲ್ಲ. ಇದೇ ಕಾರಣಕ್ಕೆ ಜೆಜೆಎಂ ಯೋಜನೆಗೆ ನೀಡುತ್ತಿದ್ದ 11 ಸಾವಿರ ಕೋ. ರೂ. ಅನುದಾನ ಕಡಿತವಾಗಿದೆ. ನಿಮ್ಮಲ್ಲಿರುವ ನ್ಯೂನತೆ ಕಾರಣಕ್ಕೆ ಕೇಂದ್ರ ಅನುದಾನ ಕಡಿತಗೊಳಿಸಿದೆ ಎಂದು ಕುಮಾರಸ್ವಾಮಿ ಅವರು ಹೇಳಿದರು.

# ಗೌಡರ ಜೀವನ ಹಾಳು ಮಾಡಿದ್ದು ಕಾಂಗ್ರೆಸ್

## ಉತ್ತಮ ತೀರ್ಮಾನ ತೆಗೆದುಕೊಳ್ಳಲು ಬಿಜೆಪಿ ಜೊತೆಯಲ್ಲಿದ್ದೇನೆ: ಹೆಚ್.ಡಿ.ಕುಮಾರಸ್ವಾಮಿ

• ಪ್ರಜೋದಯ ವರದಿ



**ಹಾಸನ:** ದೇವೇಗೌಡರು ಕಾಂಗ್ರೆಸ್ ಪಕ್ಷ ನೋಡುತ್ತಲ್ಲೇ ತಮ್ಮ ಜೀವನನ್ನು ಹಾಳು ಮಾಡಿಕೊಂಡರು. ಅವರ ರಾಜಕೀಯ ಜೀವನ ಹಾಳಾಗಬೇಕಾ ದರೆ ಇದೇ ಕಾಂಗ್ರೆಸ್ ಕಾರಣ ವೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರ ಸ್ವಾಮಿ ಅವರು ಆರೋಪಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಮತ್ತೆ ಮುಖ್ಯಮಂತ್ರಿಯಾಗಬೇಕೆಂಬ ಉದ್ದೇಶ ಇಟ್ಟುಕೊಂಡಿಲ್ಲ. ನನ್ನ ಬಳಿಗೆ ಬರುವ ಜನರಿಗೆ ಕೈಲಾದಷ್ಟು ಸಹಾಯ ಮಾಡಿದರೆ ಸಾಕೆನ್ನುವ ಮಟ್ಟಕ್ಕೆ ನಾನಿದ್ದೇನೆ. ನನ್ನಲ್ಲಿ ಸಣ್ಣತನ ವಿಲ್ಲ, ನಾನು ಕಾಂಗ್ರೆಸ್ ನೋಡಿ ಸಾಕಾಗಿ, ಉತ್ತಮವಾದ ತೀರ್ಮಾನ ಗಳನ್ನು ತೆಗೆದುಕೊಳ್ಳಬೇಕೆಂದು ಬಿಜೆಪಿ ಜೊತೆ ಸಂಬಂಧ ಬೆಳೆಸಿದ್ದೇನೆ ಎಂದರು.

ಯಾರು, ಯಾವ ಪಕ್ಷ ಜಿಲ್ಲೆಯಲ್ಲಿ ಲೂಟಿ ಹೊಡೆದಿದೆ, ಯಾರಿಂದ ಜಿಲ್ಲೆಗೆ ಅನ್ಯಾಯವಾಗಿ ಎಂಬುವುದರ ಬಗ್ಗೆ ಈಗ ಮಾತನಾಡಲು ಹೋಗುವುದಿಲ್ಲ. ಸಮಯ ಬಂದಾಗ ಮುಂದಿನ ದಿನಗಳಲ್ಲಿ ಹೇಳುತ್ತೇನೆ. ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಜಿಲ್ಲೆಗೆ ಕೈಗಾರಿಕೆ ಸ್ಥಾಪನೆಗೆ ಮುಂದಾದರೆ, ನಾನು ಅಧಿಕಾರದಿಂದ ಕೆಳಗಿಳಿದ ನಂತರ ಬೇರೆ ಬೇರೆ ಕಾರಣ ನೀಡಿ ಅದನ್ನು ಮತ್ತೊಂದು ಜಿಲ್ಲೆಗೆ ವರ್ಗಾಯಿಸಲಾಯಿತು. ಬೇರೆ ಜಿಲ್ಲೆಗೆ ತೆಗೆದುಕೊಂಡು ಹೋಗಿದ್ದಕ್ಕೆ ಬೇಸರವಿಲ್ಲ. ಆದರೆ, ಈ ಜಿಲ್ಲೆಯ ಜನರು ಏನು ಅನ್ಯಾಯ ಮಾಡಿದ್ದಾರೆ, ನಿಮಗೆ ಮತ ನೀಡಿಲ್ಲವೇ ಎಂದು ಪ್ರಶ್ನಿಸಿದರು.

ಕಾಂಗ್ರೆಸ್‌ನವರು ಇತ್ತೀಚೆಗೆ ಬಹಳ ವೇಗವಾಗಿ ಲಗ್ಗೆ ಹಾಕುತ್ತಿದ್ದಾರೆ. ವರ್ಣರಂಜಿತ ವೇದಿಕೆಗಳಲ್ಲಿ ಸಮಾವೇಶಗಳನ್ನು ನಡೆಸುವ ಮೂಲಕ ಜಿಲ್ಲೆಗೆ ಯಾರು ಮಾಡದ ಅಭಿವೃದ್ಧಿಗೆ ಚಾಲನೆ ನೀಡಿದ್ದೇವೆ, ಸುಮಾರು 70 ಸಾವಿರ ಕುಟುಂಬಗಳ ಫಲಾನುಭವಿಗಳನ್ನು ಗುರುತಿಸಿ ಆರ್ಥಿಕ ನೆರವು ನೀಡಿದ್ದೇವೆಂದು ಪ್ರಚಾರ ಪಡೆದುಕೊಳ್ಳುತ್ತಿರುವುದನ್ನು ಗಮನಿಸಿದ್ದೇನೆ. ಏನೇ ಇದ್ದರೂ ಜಿಲ್ಲೆಗೆ ನನ್ನ ಕೈಲಾದಷ್ಟು ಕೆಲಸವನ್ನು ಮಾಡಲು ಶ್ರಮಿಸುತ್ತಿದ್ದೇನೆಂದು ಹೇಳಿದರು.


# ಅನ್ಯ ರಾಜ್ಯದವರ ಹೊರಹಾಕಲು ನೋಟೀಸ್

## ಕಳ್ಳತನ, ಅಕ್ರಮ ಚಟುವಟಿಕೆ ಹೆಚ್ಚಳ: ಅರೇಹಳ್ಳಿ ಗ್ರಾ.ಪಂ. ಕ್ರಮ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಮಲೆನಾಡು ಭಾಗದಲ್ಲಿ ಕಾಫಿ ಕಳ್ಳತನ ಹಾಗು ಅಪರಾಧ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಅನ್ಯ ರಾಜ್ಯದವರನ್ನು ಬಾಡಿಗೆ ಮನೆಯಿಂದ ಹೊರಹಾಕಲು ಬೇಲೂರು ತಾಲ್ಲೂಕಿನ ಅರೇಹಳ್ಳಿ ಗ್ರಾಮ ಪಂಚಾಯಿತಿ ನೋಟೀಸ್ ನೀಡಿದೆ.

ಅರೇಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ನಡೆದ ಕಾಫಿ ಹಾಗು ಮನೆಗಳಲ್ಲಿ ಸರಣಿ ಕಳ್ಳತನ ಪ್ರಕರಣಗಳಲ್ಲಿ ಹೊರ ರಾಜ್ಯಗಳಿಂದ ವಲಸೆ ಬಂದಿರುವವರು ಹೆಚ್ಚಾಗಿ ಭಾಗಿಯಾಗಿರುವುದು ಕಂಡುಬಂದಿದೆ. ಕಳ್ಳತನ ಮಾತ್ರವಲ್ಲದೇ ಗಾಂಜಾ ಮಾರಾಟ ಮಾಡುತ್ತಿರುವಾಗಲೂ ಸಿಕ್ಕಿ ಬಿದ್ದಿದ್ದಾರೆ. ಈ ಹಿನ್ನಲೆ ಗ್ರಾಮ ಪಂಚಾಯಿತಿ ಆಡಳಿತ



ಹೊರಹಾಕುವ ಕ್ರಮಕ್ಕೆ ಮುಂದಾಗಿದೆ.

ಹೆಚ್ಚು ಬಾಡಿಗೆಗೆ ಹೊರ ರಾಜ್ಯಗಳಿಂದ ಬಂದಿರುವವರಿಗೆ ಮನೆ ನೀಡಲಾಗುತ್ತಿದೆ. ಹೀಗಾಗಿ ಬೇಲೂರು ತಾಲ್ಲೂಕು ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಪರಾಧ ಕೃತ್ಯಗಳಲ್ಲಿ ಅನ್ಯ ರಾಜ್ಯದ ಜನರೇ ಹೆಚ್ಚಾಗಿ ಭಾಗಿಯಾಗುತ್ತಿದ್ದಾರೆಂಬ ಆರೋಪ ಕೇಳಿ ಬರುತ್ತಿದೆ. ಕಾಫಿ ಬೆಳೆಗಾರರಿಂದ ವ್ಯಾಪಕ ದೂರು ಬಂದ ಕಾರಣ ಅರೇಹಳ್ಳಿ ಗ್ರಾಮ ಪಂಚಾಯಿತಿ ಈ ನಿರ್ಧಾರ ಕೈಗೊಂಡಿದೆ.

ನೋಟೀಸ್ ತಲುಪಿದ 10 ದಿನಗಳೊಳಗೆ ಅನ್ಯ ರಾಜ್ಯದ ವಲಸೆ ಕಾರ್ಮಿಕರನ್ನು ಮನೆ ಖಾಲಿ ಮಾಡಿಸಬೇಕು. ಕಳ್ಳತನ, ದರೋಡೆ, ಅಪರಾಧ ಪ್ರಕರಣಗಳು ನಡೆದರೆ ಮನೆ ಮಾಲೀಕರೆ ನೇರ ಹೊಣೆ ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಚ್ಚರಿಕೆ ನೀಡಿದ್ದಾರೆ.

# ವಿಮಾನ ನಿಲ್ದಾಣ ಕಾಮಗಾರಿ ಪರಿಶೀಲಿಸಿದ ಕುಮಾರಸ್ವಾಮಿ

## ಭೂಸಂತ್ರಸ್ತ ರೈತರ ಕುಟುಂಬಕ್ಕೆ ಅನ್ಯಾಯವಾಗಲು ಬಿಡುವುದಿಲ್ಲ: ಕೇಂದ್ರ ಸಚಿವರ ಭರವಸೆ

• ಪ್ರಜೋದಯ ವರದಿ

**ಹಾಸನ:** ದಶಕಗಳಿಂದ ಕುಂಟುತ್ತಾ ಸಾಗುತ್ತಿರುವ ಹಾಸನ ವಿಮಾನ ನಿಲ್ದಾಣ ಕಾಮಗಾರಿಗೆ ವೇಗ ನೀಡುವ ಸಲುವಾಗಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಭಾನುವಾರ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ವಸ್ತುಸ್ಥಿತಿ ಪರಿಶೀಲನೆ ನಡೆಸಿದರು.

ಅಧಿಕಾರಿಗಳು ಮತ್ತು ಶಾಸಕ ಹೆಚ್.ಪಿ.ಸ್ವರೂಪ್ ಅವರಿಂದ ಮಾಹಿತಿ ಪಡೆದುಕೊಂಡ ಅವರು, ಕಾಮಗಾರಿ ಪೂರ್ಣಗೊಳಿಸಲು ಬೇಕಿರುವ ಒಟ್ಟು ಅನುದಾನ, ಸರ್ವಿಸ್ ರಸ್ತೆ, ಭೂಸ್ವಾಧೀನ, ಸುತ್ತಮುತ್ತಲಿನ ರೈತರ ಸಮಸ್ಯೆಗಳ ಬಗ್ಗೆ ಅವಲೋಕನ ಮಾಡಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬೆಂಗಳೂರು ಹೊರತುಪಡಿಸಿ ಜಿಲ್ಲಾ ಕೇಂದ್ರದಲ್ಲಿ ಮೊದಲು ವಿಮಾನ ನಿಲ್ದಾಣ ಆಗಬೇಕಿದ್ದುದು ಹಾಸನದಲ್ಲಿ. ಮಾಜಿ ಪ್ರಧಾನಿ ದೇವೇಗೌಡರು ತನ್ನ ದೂರದೃಷ್ಟಿಕೋನದಂತೆ ಕೇಂದ್ರ ಸಚಿವರ ಗಮನ ಸೆಳೆದು, ಭೂಮಿ ಪಡೆದುಕೊಳ್ಳಲು ಸ್ಥಳೀಯವಾಗಿ ಬೂವನಹಳ್ಳಿ ಸೇರಿ ಸುತ್ತಮುತ್ತಲ ಗ್ರಾಮದ ರೈತರ ಮನವೊಲಿಸಿದರು. ದೇವೇಗೌಡರ ಮೇಲಿದ್ದ ಅಭಿಮಾನಕ್ಕೆ ರೈತರು ತಮ್ಮ ಭೂಮಿಕೊಟ್ಟರು ಎಂದರು.



ದೇವೇಗೌಡರಿಗೆ ಪ್ಯಾಸೆಂಜರ್ ಏರ್‌ಕ್ರಾಫ್ಟ್ ಮಾಡಬೇಕೆಂಬ ಉದ್ದೇಶಕ್ಕಿಂತ ಕಾರ್ಗೋ ವಿಮಾನ ನಿಲ್ದಾಣ ಮಾಡಿ ಜಿಲ್ಲೆಯ ರೈತರು ಬೆಳೆದ ಬೆಳೆಯನ್ನು ವಿದೇಶಕ್ಕೆ ರಫ್ತು ಮಾಡಬೇಕೆಂಬ ಕನಸಿತ್ತು. ಅದಕ್ಕಾಗಿ ಬೂವನಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಸ್ಥರನ್ನು ಸೇರಿಸಿ ಚರ್ಚೆ ಮಾಡಿ ರೈತರಿಂದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಆದರೆ, ಇಂದು ರೈತರ ಭೂಮಿಯೇ ಇಲ್ಲ. ಅಲ್ಲಿ ಹಲವಾರು ಅಕ್ರಮಗಳು ನಡೆಯುತ್ತಿವೆ. ಈಗ ಎಲ್ಲಾ ಕಾಮಗಾರಿ ಪೂರ್ಣಗೊಳ್ಳಲು 143 ಕೋ.ರೂ. ಅವಶ್ಯಕತೆ ಎಂದು ತಿಳಿಸಿದ್ದಾರೆ. ವಿಮಾನ ನಿಲ್ದಾಣ ಸಮೀಪ ಹಾದುಹೋಗಿರುವ ಹೈಟೆನ್ಸನ್ ವಿದ್ಯುತ್ ಮಾರ್ಗವನ್ನು ಕೂಡಲೇ ಬದಲಿಸುವ ಸಂಬಂಧ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರಲ್ಲಿ ಮನವಿ ಮಾಡಿದ್ದೇನೆ. ಆ ಕಾಮಗಾರಿಗೆ ಈಗಾಗಲೇ 14 ಕೋ. ರೂ. ನೀಡಲಾಗಿದೆ. ಇನ್ನೂ 24 ಕೋ. ರೂ. ಕೇಳುತ್ತಿದ್ದಾರೆ ಎಂದು ತಿಳಿದು ಬಂದಿದೆ ಎಂದರು.

ಸ್ಥಳೀಯ ರೈತರ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ, ನಾನು ದೇವೇಗೌಡರ ಮಗನಾಗಿ ಭೂಮಿ ನೀಡಿದ ರೈತರ ಕುಟುಂಬಕ್ಕೆ ಅನ್ಯಾಯವಾಗದ ರೀತಿಯಲ್ಲಿ ಕ್ರಮ ವಹಿಸಲಾಗುವುದು. ಅಲ್ಲಿನ ಸಾಕಷ್ಟು ಭೂ ಅಕ್ರಮಗಳು ನಡೆದಿವೆ. ರೈತರ ಭೂಮಿಯನ್ನು ಕಣ್ಮರೆ ಮಾಡಲಾಗಿದೆ. ಸ್ಮಶಾನಭೂಮಿ ಸಮಸ್ಯೆ ಇದೆ. ಎಲ್ಲವನ್ನೂ ಪರಿಹರಿಸಲು ಪ್ರಯತ್ನಿಸುತ್ತೇನೆಂದು ಭರವಸೆ ನೀಡಿದರು.

# ಪೋಲಿಯೋ ಅಭಿಯಾನಕ್ಕೆ ಸಂಸದ ಚಾಲನೆ



• ಪ್ರಜೋದಯ ವರದಿ

**ಹೊಳೆನರಸೀಪುರ:** ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಭಾನುವಾರ ಸಂಸದ ಶ್ರೇಯಸ್ ಪಟೇಲ್ ಅವರು ಪಲ್ಸ್ ಪೋಲಿಯೋ ಅಭಿಯಾನಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಪೋಲಿಯೋ ಒಂದು ಹನಿ ಔಷಧದಿಂದ ಮಕ್ಕಳ ಭವಿಷ್ಯದಲ್ಲಿ ಎದುರಾಗಬಹುದಾದ ದೊಡ್ಡ ತೊಂದರೆಯನ್ನು ತಡೆಯಬಹುದಾಗಿದೆ. ಆದ್ದರಿಂದ ಎಲ್ಲರೂ ತಮ್ಮ ಮಕ್ಕಳಿಗೆ ಲಸಿಕೆ ಹಾಕಿಸಿಸಬೇಕು. ಮಕ್ಕಳ ಆರೋಗ್ಯವೇ ನಮ್ಮ ಸಮಾಜದ ಬಲ. ಪೋಲಿಯೋ ಮುಕ್ತ ಹಾಸನ ಜಿಲ್ಲೆ ಕಟ್ಟುವ ಸಂಕಲ್ಪದೊಂದಿಗೆ ಎಲ್ಲಾ ಪೋಷಕರು ತಮ್ಮ ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೊ ಹನಿ ಹಾಕಿಸಿ ಎಂದು ಕೋರಿದರು. ಆಸ್ಪತ್ರೆ ವೈದ್ಯರು, ನರ್ಸ್, ಆಶಾ ಕಾರ್ಯಕರ್ತೆಯರು ಹಾಜರಿದ್ದರು.


# ಸಂಘ-ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತು ಕಾಪಾಡಿಕೊಳ್ಳುವುದು ಮುಖ್ಯ

## ಜಿಲ್ಲಾ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ

• ಪ್ರಜೋದಯ ವರದಿ

**ಹಾಸನ:** ಸಂಘ-ಸಂಸ್ಥೆಯಲ್ಲಿ ಬಹಳ ವರ್ಷಗಳ ಕಾಲ ಆರ್ಥಿಕ ಶಿಸ್ತು ಕಾಪಾಡಿಕೊಂಡು, ಸಮತೋಲನದಲ್ಲಿ ಸರಿದೂಗಿಸಿಕೊಂಡು ಹೋಗುವುದು ಕಷ್ಟದ ಕೆಲಸ. ಆ ನಡುವೆಯೂ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುವುದು ಸಂತೋಷದ ವಿಚಾರವೆಂದು ಜಿಲ್ಲಾ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ ಅವರು ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ರಾಜ್ಯ ಸರ್ಕಾರಿ ನೌಕರರ ಕೋ-ಆಪರೇಟಿವ್ ಸೊಸೈಟಿ, ಸರ್ಕಾರಿ, ಅರೆ ಸರ್ಕಾರಿ ಹಾಗು ನಿಗಮ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಿಂದ ಭಾನುವಾರ ಹಮ್ಮಿಕೊಂಡಿದ್ದ ನೂತನ ವರ್ಷದ ಕ್ಯಾಲೆಂಡರ್ ಬಿಡುಗೊಳಿಸಿ ಮಾತನಾಡಿದ ಅವರು, ಸಂಘ-ಸಂಸ್ಥೆಗಳನ್ನು ಉತ್ಸಹದಲ್ಲಿ ಪ್ರಾರಂಭ ಮಾಡಬಹುದು. ಆದರೆ, ಬಹಳ ವರ್ಷಗಳ ಕಾಲ ಹಿಡಿದಿಟ್ಟುಕೊಳ್ಳುವುದು ಕಷ್ಟದ



ಕೆಲಸ. ಎಲ್ಲಾ ಸಂಘ ಸಂಸ್ಥೆಯಲ್ಲೂ ಪರ-ವಿರೋಧ, ಜಾತಿ ಕೆಲಸ ಮಾಡುವುದರಿಂದ ಸರಿದೂಗಿಸಿಕೊಂಡು ಹೋಗುವುದು ಮುಖ್ಯ ಎಂದರು.

ಸರ್ಕಾರಿ, ಅರೆ ಸರ್ಕಾರಿ ಹಾಗು ನಿಗಮ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ಅಧ್ಯಕ್ಷ ಕೆ.ಎಂ.ಶ್ರೀನಿವಾಸ್ ಅವರು ಮಾತನಾಡಿ, ನಮ್ಮ ಗೃಹ ನಿರ್ಮಾಣ ಸಹಕಾರ ಸಂಘ ಪ್ರಾರಂಭವಾಗಿ 7 ವರ್ಷಗಳೆ ಕಳೆದಿದೆ. ಬಡಾವಣೆ ನಿರ್ಮಿಸಿ ಸಾರ್ವಜನಿಕವಾಗಿ ಮತ್ತು ನಮ್ಮ ಸಿ ಗ್ರೂಪ್ ನೌಕರರಿಗೆ ಕೈಗೆಟಕುವ ದರದಲ್ಲಿ ನಿವೇಶನಗಳನ್ನು ಸದಸ್ಯರಿಗೆ ಕೊಡುತ್ತಾ ಬಂದಿದ್ದೇವೆ. ಈಗಾಗಲೇ 500 ನಿವೇಶನಗಳನ್ನು ಸದಸ್ಯರಿಗೆ ನೀಡಿದ್ದು, ದಲ್ಲಾಳಿಗಳ ಹಾವಳಿ ಇಲ್ಲದೇ ಹೆಚ್ಚಿನ ಬೆಲೆ ನೀಡದ ರೀತಿ ಕಂತಿನ ಬೆಲೆಯಲ್ಲಿ ಸಿಗುವಂತೆ ನೋಡಿಕೊಂಡಿದ್ದೇವೆ. ಮುಂದೆ ಇನ್ನು ಹಲವಾರು ನಿವೇಶನ ಕೊಡುವ ಗುರಿ ಹೊಂದಿದ್ದೇವೆ. ಪ್ರಸ್ತುತ 4 ಕೋಟಿ ಸಾಲವನ್ನು ನಮ್ಮ ಕೋ-ಆಪರೇಟಿವ್ ಸೊಸೈಟಿ ನೀಡಿದೆ. ಮುಂದಿನ ದಿನಗಳಲ್ಲಿ ಎರಡು ಬಡಾವಣೆಗಳಲ್ಲೂ ಕಡಿಮೆ ದರದಲ್ಲಿ ನಿವೇಶನ ಕೊಡಲಾಗುವುದೆಂದು ಹೇಳಿದರು.

ನಮ್ಮ ಸಂಘದ ಮೂಲಕ ಅನೇಕ ಸೇವಾ ಚಟುವಟಿಕೆಗಳನ್ನು ಮಾಡಿದ್ದೇವೆ. ಗಿಡಗಳನ್ನು ಬೆಳೆಸುವುದು, ಕ್ರೀಡಾ ಚಟುವಟಿಕೆ, ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಪ್ರೋತ್ಸಹ ಧನ ನೀಡುವುದು ಹಾಗು ಹಸಿರು ಭೂಮಿ ಪ್ರತಿಷ್ಠಾನದ ಕೆಲಸಗಳಿಗೆ ನಾವು ಕೈಜೋಡಿಸುತ್ತಿದ್ದೇವೆ ಎಂದರು. ಪತ್ರಕರ್ತ ವೆಂಕಟೇಶ್, ಪತ್ರಕರ್ತರ ಸಂಘದ ಕಾರ್ಯದರ್ಶಿ ಹರೀಶ್, ಕೋ. ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಪರಮೇಶ್, ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಟಿ.ರಾಜು, ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು, ನಿರ್ದೇಶಕರು ಇದ್ದರು.

# ಕಾಫಿ ಕಳವಿಗೆ ಯತ್ನ : ಕಳ್ಳನನ್ನು ಪೊಲೀಸರಿಗೆ ಒಪ್ಪಿಸಿದ ಗ್ರಾಮಸ್ಥರು

• ಪ್ರಜೋದಯ ವರದಿ

**ಬೇಲೂರು :** ಕಣದಲ್ಲಿ ಒಣಗಲು ಹಾಕಿದ್ದ ಕಾಫಿ ಬೀಜವನ್ನು ಕಳವು ಮಾಡಲು ಯತ್ನಿಸಿದ ವ್ಯಕ್ತಿಯನ್ನು ಗ್ರಾಮಸ್ಥರು ಹಿಡಿದು ಪೊಲೀಸರಿಗೆ ಒಪ್ಪಿಸಿರುವ ಘಟನೆ ತಾಲ್ಲೂಕಿನ ಚೋಕನಹಳ್ಳಿ ಗ್ರಾಮದಲ್ಲಿ ನಡೆದಿದೆ. ಅದೇ ಗ್ರಾಮದ ನಿವಾಸಿ ರುದ್ರೇಶ್ ಗೌಡ ಕಳ್ಳತನಕ್ಕೆ ಯತ್ನಿಸಿದ್ದಾನೆ.

ತಾಲ್ಲೂಕಿನ ಯಮಸಂಧಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೋಕನ ಹಳ್ಳಿ ಗ್ರಾಮದ ಗ್ರಾಮದ ನಂದೀಶ್ ಅವರಿಗೆ ಸೇರಿದ ಕಾಫಿ ತೋಟದ ಕಣದಲ್ಲಿ ಒಣಗಿಸಲು ಹಾಕಿದ್ದ ಕಾಫಿ ಬೀಜವನ್ನು ಅದೇ ಗ್ರಾಮದ ರುದ್ರೇಶ್‌ಗೌಡ ಶನಿವಾರ ರಾತ್ರಿ 10 ಗಂಟೆ ಸಮಯದಲ್ಲಿ ಸುಮಾರು 50 ಕೆ.ಜಿ. ಕಾಫಿ ಬೀಜ ತುಂಬಿದ ಚೀಲವನ್ನು ಕಳ್ಳತನ ಮಾಡಲು ಯತ್ನಿಸುತ್ತಿದ್ದ. ಈ ವೇಳೆ ತೋಟದ ಪಕ್ಕದಲ್ಲೇ ಮಲಗಿದ್ದ ನಂದೀಶ್ ಅವರಿಗೆ ನಾಯಿಗಳ ಬೊಗಳುವ ಶಬ್ದ ಕೇಳಿಸಿದೆ. ತಕ್ಷಣ ಎಚ್ಚರಗೊಂಡು ಸ್ಥಳಕ್ಕೆ ತೆರಳಿದಾಗ ಕಾಫಿ ಬೀಜ ಕಳ್ಳತನ ನಡೆಯುತ್ತಿರುವುದು ಗೊತ್ತಾಗಿದೆ. ತಕ್ಷಣ ಗ್ರಾಮಸ್ಥರ ಸಹಕಾರದೊಂದಿಗೆ ಕಳ್ಳನನ್ನು ಹಿಡಿದು, ಥಳಿಸಿ, ಭಾನುವಾರ ಬೆಳಿಗ್ಗೆ ಕಾಫಿ ಬೀಜಗಳ ಮಾಲಿನ ಸಮೇತ ಪಟ್ಟಣ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಈ ಕುರಿತು ಮಾತನಾಡಿದ ತೋಟದ ಮಾಲೀಕ ನಂದೀಶ್, ಕಳ್ಳತನಕ್ಕೆ ಯತ್ನಿಸಿದ ರುದ್ರೇಶ್‌ಗೌಡ ಕೇವಲ ಕಾಫಿ ಬೀಜಗಳನ್ನಷ್ಟೇ ಅಲ್ಲದೆ, ಈ ಹಿಂದೆ ಪೈಪು, ಮೋಟಾರ್ ಸೇರಿ ಇನ್ನಿತರೆ ವಸ್ತುಗಳ ಕಳ್ಳತನದಲ್ಲೂ ತೊಡಗಿದ್ದಾನೆಂಬ ಅನುಮಾನಗಳಿವೆ. ಇತ್ತೀಚಿನ ದಿನಗಳಲ್ಲಿ ಕಾಫಿ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಕಾಫಿ ತೋಟದ ಮಾಲೀಕರು ಭಯಭೀತರಾಗಿ ದ್ದಾರೆ. ಈ ನಿಟ್ಟಿನಲ್ಲಿ ಪೊಲೀಸರು ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ನಮ್ಮ ಭಾಗದಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದು, ಅನೇಕ ಕಾಫಿ ಗಿಡಗಳು ಹಾಗು ಇತರೆ ಬೆಳೆಗಳು ನಾಶವಾಗಿವೆ. ಆನೆ ಭಯದಿಂದ ಕೂಲಿ ಕಾರ್ಮಿಕರೂ ಕೆಲಸಕ್ಕೆ ಬರಲು ಹೆದರುತ್ತಿದ್ದಾರೆ. ಈ ಎಲ್ಲಾ ಕಷ್ಟದ ನಡುವೆ ಕಾಫಿ ಕೊಯ್ಲು ಮಾಡಿ ಮನೆಯ ಹತ್ತಿರದ ಕಣದಲ್ಲಿ ಒಣಗಿಸಲು ಹಾಕಿದ್ದ ಕಾಫಿಯನ್ನು ಕಳವು ಮಾಡಲಾಗುತ್ತಿರುವುದು ಬೆಳೆಗಾರರನ್ನು ಕಂಗೆಡಿಸಿದೆ.

# ಯಾರೋ ಒಬ್ಬರಿಂದ ಪಕ್ಷ ಅಧಿಕಾರಕ್ಕೆ ಬಂದಿಲ್ಲ

• ಪ್ರಜೋದಯ ವರದಿ

**ವಿಜಯಪುರ:** ಸಚಿವ ಎಂ.ಬಿ. ಪಾಟೀಲ ಅವರು, ಕಾಂಗ್ರೆಸ್ ಯಾರೋ ಒಬ್ಬ ನಾಯಕನಿಂದ ಬೆಳೆದಿಲ್ಲವೆಂಬ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಯನ್ನು ಬೆಂಬಲಿಸುವ ಮೂಲಕ ಪರೋಕ್ಷವಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಟಾಂಗ್ ನೀಡಿದ್ದಾರೆ.

ಕಾಂಗ್ರೆಸ್ ಯಾರೋ ಒಬ್ಬ ನಾಯಕನಿಂದ ಬೆಳೆದಿಲ್ಲ. ಹೀಗಾಗಿ ಯಾರೊಬ್ಬರೂ ನನ್ನಿಂದ ಅಧಿಕಾರಕ್ಕೆ ಬಂತು, ನಾನೇ ಪಕ್ಷ ಕಟ್ಟಿದ್ದೇನೆಂದು ಹೇಳಬಾರದು. ಕಾಂಗ್ರೆಸ್ ಪಕ್ಷ ಕಾರ್ಯಕರ್ತರಿಂದ ಕಟ್ಟಿದ ಪಕ್ಷ. ಪಕ್ಷ ಅಂದ ಮೇಲೆ ಎಲ್ಲರ ಪಾತ್ರವೂ ಇರುತ್ತೆ ಎಂದು ಮಲ್ಲಿಕಾರ್ಜುನ ಖರ್ಗೆ

» ನಾಲ್ಕನೇ ಪುಟದಲ್ಲಿ

## ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಹೆಚ್.ಪಿ.ಸ್ವರೂಪ್ ಚಾಲನೆ

# ಆರೋಗ್ಯ ಸಮಸ್ಯೆ ತಡೆಗೆ ಪೋಲಿಯೋ ಹಾನಿ ಹಾಕಿಸಿ

• ಪ್ರಜೋದಯ ವರದಿ

ಹಾಸನ: ಮಕ್ಕಳಲ್ಲಿ ಆರೋಗ್ಯ ಸಮಸ್ಯೆಗಳು ಬರದಂತೆ ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿಯೊಬ್ಬ ತಾಯಂದಿರು ಪೋಲಿಯೋ ಲಸಿಕೆ ಹಾಕಿಸಬೇಕೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ತಿಳಿಸಿದರು.

ನಗರದ ಹಿಮ್ಸ್ ಆವರಣದಲ್ಲಿರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಭಾನುವಾರ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಪೋಲಿಯೋ ಲಸಿಕೆ ಬಹಳ ಮುಖ್ಯ. 5 ವರ್ಷದೊಳಗಿನ ಮಕ್ಕಳಿಗೆ ಎಲ್ಲಾ ತಪ್ಪದೇ ಪೋಲಿಯೋ ಲಸಿಕೆ ಹಾಕಿಸುವ ಮೂಲಕ ಅಭಿಯಾನವನ್ನು



ಯಶಸ್ವಿಗೊಳಿಸಬೇಕು. ವೈದ್ಯರ ಹೇಳಿಕೆಯಂತೆ ಮಗುವಿಗೆ ಕೆಮ್ಮು, ಶೀತ, ಜ್ವರ ಇದ್ದರು ಸಹ ಲಸಿಕೆ ಹಾಕಿಸಬಹುದೆಂದು ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ಪೋಲಿಯೋ ಮುಕ್ತ ಸಮಾಜ, ಆರೋಗ್ಯವಂತ ಸಮಾಜದ ಸೂಚಕ. ಜಿಲ್ಲೆಯಲ್ಲಿರುವ ಮಕ್ಕಳಿಗೆ ಕಡ್ಡಾಯವಾಗಿ ಪಲ್ಸ್ ಪೋಲಿಯೋ ಲಸಿಕೆ ಹಾಕಿಸುವುದರ ಮೂಲಕ ಮಗುವಿನ ಉಜ್ವಲ ಭವಿಷ್ಯ ರೂಪಿಸಿ ಎಂದು ಪೋಷಕರಲ್ಲಿ ಮನವಿ ಮಾಡಿದರು.

ಜಿಲ್ಲಾದ್ಯಂತ ಡಿ.21 ರಂದು ಪಲ್ಸ್ ಪೋಲಿಯೋ ಕಾರ್ಯಕ್ರಮದಡಿಯಲ್ಲಿ ಎರಡು ಹನಿಗಳು-ಪೋಲಿಯೋ ವಿರುದ್ಧ ನಿರಂತರ ಗೆಲುವು ಎಂಬ ಘೋಷ ವಾಕ್ಯದೊಂದಿಗೆ ಲಸಿಕಾ ಕಾರ್ಯಕ್ರಮ ಆಯೋಜಿಸಲಾಗಿದೆ. 5 ವರ್ಷದೊಳಗಿನ ಮಕ್ಕಳ ತಂದೆ ತಾಯಿಗಳು ಮತ್ತು ಪೋಷಕರು ತಪ್ಪದೆ ತಮ್ಮ ಹತ್ತಿರದ ಪಲ್ಸ್ ಪೋಲಿಯೋ ಬೂತ್‌ಗಳಿಗೆ ಮಕ್ಕಳನ್ನು ಕರೆದು ತಂದು ಲಸಿಕೆ ಹಾಕಿಸುವಂತೆ ತಿಳಿಸಿದರು.

» ನಾಲ್ಕನೇ ಪುಟದಲ್ಲಿ

**ಜಿಲ್ಲೆಯಲ್ಲಿ 1.06 ಲಕ್ಷ ಮಕ್ಕಳ ಗುರಿ**

ಜಿಲ್ಲೆಯಲ್ಲಿ 0-5 ವರ್ಷದೊಳಗಿನ 1,06,747 ಮಕ್ಕಳ ಗುರಿ ಹೊಂದಿದ್ದು ಮತ್ತು 4,68,493 ಮನೆಗಳನ್ನು ತಲುಪುವ ಗುರಿ ಹೊಂದಲಾಗಿದೆ. ಇಂದು ನಗರ ಪ್ರದೇಶದಲ್ಲಿ 140 ಮತ್ತು ಗ್ರಾಮೀಣ ಪ್ರದೇಶದಲ್ಲಿ 732 ಸೇರಿ ಒಟ್ಟು 872 ಬೂತ್‌ಗಳಲ್ಲಿ ಲಸಿಕೆ ಹಾಕಲಾಗುತ್ತಿದೆ. ನಂತರ ಎರಡನೇ ದಿನದಿಂದ ಒಂದು ತಂಡದಲ್ಲಿ 2 ಸದಸ್ಯರಂತೆ 1744 ತಂಡಗಳು ಮನೆ ಮನೆ ಭೇಟಿ ಮಾಡಲಿದ್ದಾರೆಂದು ಜಿಲ್ಲಾಧಿಕಾರಿ ತಿಳಿಸಿದರು.

# ಒಂದು ಕಂತು ಗೃಹಲಕ್ಷ್ಮಿ ನಾಳೆ ಬಿಡುಗಡೆ

• ಪ್ರಜೋದಯ ವರದಿ

**ಬೆಂಗಳೂರು :** ಪ್ರತಿ ಮನೆಯ ಗೃಹಲಕ್ಷ್ಮಿಯರ ಖಾತೆಗಳಿಗೆ ಒಂದು ಕಂತಿನ ಹಣ ಬಿಡುಗಡೆ ಮಾಡುವುದಾಗಿ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಹೆಬ್ಬಾಳ್ಕರ್, ತಾವು ಯಾವಾಗಲೂ ಕಂತು ಬಿಡುಗಡೆ ಮಾಡುವುದಾಗಿ ಹೇಳುತ್ತೇನೆ. ತಿಂಗಳ ಹೆಸರು ಹೇಳುವುದಿಲ್ಲ. ಈಗಾಗಲೇ ಆರ್ಥಿಕ ಇಲಾಖೆಯವರು ಗೃಹಲಕ್ಷ್ಮಿ ಯೋಜನೆ 24ನೇ ಕಂತಿನ ಹಣ ಬಿಡುಗಡೆ ಮಾಡಿದ್ದಾರೆ. ನಾಳೆಯಿಂದ ಮುಂದಿನ ಶನಿವಾರದೊಳಗೆ 24ನೇ ಕಂತಿನ ಹಣ ಬಿಡುಗಡೆಯಾಗಲಿದೆ. 1.26 ಕೋಟಿ ಗೃಹಲಕ್ಷ್ಮಿಯ ಖಾತೆಗೆ ನಾಳೆಯಿಂದ ಹಣ ಬಿಡುಗಡೆಯಾಗಿದೆ ಎಂದರು.

# ನಿಂಬಾಫಲ ಮಹಾತ್ಮ್ಯೆ



ಈ ಮಾಹಾತ್ಮ್ಯೆ ಯಾವ ಪುರಾಣದಲ್ಲಿದೆ? ಎಲ್ಲಿ ಯಾರು ಹೇಳಿದ್ದು? ಯಾರು ಕೇಳಿದ್ದು? ಯಾವ ಇಷ್ಟಾರ್ಥಸಿದ್ದಿಗಾಗಿ? ಎಂದೆಲ್ಲ ಪ್ರಶ್ನೆಗಳನ್ನು ನೀವು ಕೇಳಬಹುದು. ಉತ್ತರ ಹೇಳುತ್ತಾ ಹೋದರೆ ಪೀಠಿಕಾ ಪ್ರಕರಣವೇ ಉದ್ದ ಬೆಳೆದು ಮಹಾತ್ಮ್ಯೆಯನ್ನು ಕೇಳುವಷ್ಟರಲ್ಲಿ ನಿಮಗೆ ಹಾಕಳಿಗೆ ತೊಡಗಿ ತೂಕಡಿಕೆ ಹಿಡಿದೀತು. ಆದುದರಿಂದ ಸಂಕ್ಷಿಪ್ತವಾಗಿ ಹೇಳಿಬಿಡುತ್ತೇನೆ. ಊರುಕೇರಿಯ ಪ್ರತಿಯೊಂದು ದೇಗುಲಕ್ಕೂ ಹೊಳೆ ಕೆರೆಕುಂಟೆಗೂ ತಿರುಳರಿಯದ ಮರುಳ ರಿಂದಾಚರಿಸಲ್ಪಡುವ ವ್ರತಕ್ಕೂ ಮಹಾತ್ಮ್ಯೆಯು ವಿರಚಿತವಾದಂತೆ ಇದೂ! ಎಂದ ಮೇಲೆ, ಹೇಳುವಂಥಾದಾವ ಲಿಂಬಾಫಲ ಮಾಹಾತ್ಮ್ಯೆಯಿದೆಯೋ ಅದನ್ನು ಶ್ರದ್ಧಾ ಭಕ್ತಿಗಳಿಂದ ಕೇಳು ವಂಥಾವರಾಗಬೇಕು, ಏನೆಂದರೇ

ವಿಧಾತನೆಂದೆನಿಸಿಕೊಂಡಿರುವ ದಾವ ಶ್ರೀಮನ್ನಾರಾಯಣನ ನಾಭಿ ಕಮಲಸಂಜಾತನಾದ ಬ್ರಹ್ಮನಿದ್ದಾನೆಯೋ ಆತನು ಸೃಷ್ಟಿಯ ಅಂತ್ಯ ಭಾಗದ ಪೂರ್ವಾರ್ಧದಲ್ಲಿ ಉತ್ಕೃಷ್ಟ ಫಲ ವೊಂದನ್ನು ಸೃಷ್ಟಿಸಬೇಕೆಂದು ಸಂಕಲ್ಪಿಸುವಂಥವನಾದ. ಆಕಾರದಿಂದ ವರ್ಣದಿಂದ, ಸುವಾಸನೆ ಯಿಂದ ಸ್ಪರ್ಶದಿಂದ ಜಗತ್ತಿಗೆ ಅತುಲಾನಂದವನ್ನೀಯುವಂಥಾದ್ದಾಗಿ, ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದಾಗಿ, ಬಾಳಲೆಂದು ನಿಂಬಾಫಲವನ್ನು ಸೃಷ್ಟಿಸಿ ಭೂಲೋಕದಲ್ಲಿ ಹರಡಿಬಿಡು ವಂಥವನಾಗಲು, ಜನರದನ್ನು ಕಂಡು ಮೋಹಿತರಾಗುವಂಥವರಾದರು. ಹೀಗೆ ಸಕಲ ಗುಣ ಸಂಪನ್ನವಾಗಿ ಬಂದಿರುವ ಅದಾವ ಲಿಂಬೆ ಹಣ್ಣಿದೆಯೋ ಅದನ್ನು ವೈದ್ಯರು ಬಾ ಬಾ ಎಂದರು. ಆಡಿಗೆ ಭಟ್ಟರು ಬಾರಯ್ಯಾ, ಎಂದು ಕೂಗಿ ಕರೆದರು. ಥಂಡಾಪಾನ ಗೃಹಗಳೆಲ್ಲ ಬಾ! ಬಾ, ಬಾ! ಎಂದು ಎದ್ದೋಡಿ ಹಸ್ತ ಲಾಘವಕೊಟ್ಟು ಸ್ವಾಗತೀಕರಿಸಿಕೊಂಡವು. ಕಂಡವರು ಆದರದಿಂದ ಆಘ್ರಾಣಿಸಿ ಕಣ್ಣಿಗೆ ಒತ್ತಿಕೊಳ್ಳುವಂಥವರಾದರು. ಅದು ಕಲೆಕ್ಟ್ರು, ತಾಶೀಲ್ದಾರರು, ಇನ್‌ಸ್ಪೆಕ್ಟ್ರು, ಪ್ರೆಸಿಡೆಂಟರು, ಚೇರ್ಮನರು, ಇತ್ಯಾದಿ ದೊಡ್ಡ ಮುಂಡಾಸಿನವರ ಮೇಜುಗಳನ್ನೆಲ್ಲ ಹತ್ತಿ !! (ಥೇಂಕ್ಸ್! ಥೇಂಕ್ಸ್!) ಎಂದು ಕೇಳಲ್ಪಡುವಂಥದ್ದಾಯಿತು ಈ ನಿಂಬಾ ಫಲ!

ಹೀಗೆ ನಡೆಯುತ್ತಾ ಶತಮಾನ ಶತಮಾನಗಳೇ ಕಾಲಚಕ್ರವೆಂಬಂಥಾದ್ದಾವದಿದೆಯೋ ಅದರ ಗತಿಯಲ್ಲಿ ಉರುಳುತ್ತಾ ಹೋಗುವಂಥಾದ್ದಾದವು. ಆಗ ನಮ್ಮಂಥಾ ಶ್ರೋತ್ರಿಯರಿಗೂ ಸದಾ ಪರಮಾನ್ನವೇ ದೊರೆಯುತ್ತಾ ಹೋದರೆ (ದೇವರು ಹಾಗೇ ನಡೆಯಿಸಲಿ!) ಅದರಲ್ಲೂ ಹೇಗೆ ಜುಗುಪ್ಸೆ ಯುಂಟಾಗಬಹುದೋ ಯಥಾ ತಥಾ ಪ್ರಕಾರವಾಗಿ ದಾವ ನಿಂಬಾಫಲವಿದೆಯೋ ಅದಕ್ಕೂ ಸದಾ ಸಾರ್ವದಾ ಏಕಪ್ರಕಾರವಾಗಿ ನಿರಂತರ ದೊರೆಯತ್ತಿದ್ದಂಥಾ ಆ ಆದರದಲ್ಲಿ ಅಭಿರುಚಿಯಿಲ್ಲದಂತಾಗುತ್ತಾ ಬಂತು! ಆಗ ಅದು ಅಯ್ಯೋ! ಎಲ್ಲಿ ಹೋದರೂ ಈ ಬಾಬಾ ಕೇಳಿ ಬೇಸತ್ತೆನಲ್ಲಾ. ಒಬ್ಬರಾದರೂ ಇದೇಕೆ ಬಂತಪ್ಪಾ ಎನ್ನುವವರಿಲ್ಲವಲ್ಲಾ! ಹಿಡಿಯದೆ ಬಿಡುವವನೊಬ್ಬನೂ ಇಲ್ಲವಲ್ಲಾ! ಮಾನವನ ತಿರಸ್ಕಾರ ದೃಷ್ಟಿಯನ್ನು ನಾನೆಂದು ನೋಡುವುದು! ಗಂಟುಮೋರೆ ಹಾಕಿದರೆ ಮನುಷ್ಯನು ಹೇಗೆ ತೋರುತ್ತಾನೆಂಬುದನ್ನು ನಾನು ಕಾಣುವುದು ಬೇಡವೇ? ಎಂದು ಯೋಚಿಸಿ ಯೋಚಿಸಿ ಯಾವ ಉಪಾಯವೂ ಹೊಳೆಯದಿರಲು, ತನ್ನನ್ನು ಸೃಷ್ಟಿಸಿದ ದಾವ ಬ್ರಹ್ಮನಿದ್ದಾನೆಯೋ ಆತನ ಬಳಿಗೇ ಹೋಗಿ ತನ್ನ ಸಂಕಷ್ಟಗಳನ್ನೆಲ್ಲ ನಿವೇದಿಸಿಕೊಳ್ಳ ಬೇಕೆಂದು ನಿರ್ಧರಿಸಿ ಕ್ಷೀರಸಾಗರದ ತಡಿಗೆ ಉರುಳುರುಳುತ್ತಾ ಹೋಗಿ ಅಲ್ಲಿಂದ ಶರಧಿಗೆ ಹೊರಳಿ ಕ್ಷೀರ ತರಂಗಗಳಲ್ಲಿ ಏಳುತ್ತ ಬೀಳುತ್ತ ತೇಲುತ್ತ ಮಾಲುತ್ತ ಸಾಗರ ಮಧ್ಯದಲ್ಲಿ ಶ್ರೀ ಮಹಾವಿಷ್ಣುವಿನ ಹಾಸಿಗೆಯಾಗಿರುವ ಅದಾವ ಮಹಾಶೇಷನಿರುವನೋ ಅವನ ಬಳಿಸಾಗಿ ಢಕ್ಕೆ ಹೊಡೆಯಲು, ಆ ಫಣೀಂದ್ರನು ಅದನ್ನು ತನ್ನ ಬಾಲದಿಂದೆತ್ತಿ ಬಿಸುಡಲಾಗಿ ಅದು ವಿಷ್ಣುವಿನ ನಾಭೀಕಮಲದಲ್ಲಿ ಕುಳಿತಿದ್ದ ಬ್ರಹ್ಮನ ಮೂಗಿಗೆ ತಾಗಿ ಆತನು ಬರೆಯುತ್ತಿದ್ದ ಪುಸ್ತಕದ ಮೇಲೆ ಬೀಳು ವಂಥಾದ್ದಾಯಿತು! ಆಗ ಆ ನಿಂಬಾಫಲವು ಬ್ರಹ್ಮ ಸ್ತೋತ್ರವನ್ನು ಮಾಡ ತೊಡಗಿ, ಹೇ ಸೃಷ್ಟಿಕರ್ತನೇ! ವಿಧಿಯೇ! ಬ್ರಹ್ಮನೆ ಎನ್ನುವಷ್ಟರಲ್ಲೇ ಬ್ರಹ್ಮನು ತಲೆಯೆತ್ತಿ, ''ಎಲೆ ನಿಂಬಾಫಲವೇ! ನಿನ್ನ ಸ್ತೋತ್ರಗಳನ್ನು ಕೇಳಲು ಇದೀಗ ಕಾಲವಲ್ಲ. ರಾವಣ, ಹಿರಣ್ಯಕಶ್ಯಪು, ಮುಂತಾದವರ ಕಾಲದಲ್ಲಿ ನನಗೇನೋ ತುಂಬ ವಿರಾಮವಿತ್ತು. ಅವರ ವರ್ಷ ಗಟ್ಟಳೆಯ ಸ್ತೋತ್ರಗಾನವನ್ನು ಪಾನಮಾಡುತ್ತ ಕುಳಿತು ಸಂತುಷ್ಟನಾಗಿ ವರಗಳನ್ನಿತ್ತಿದ್ದೆ. ಈಗಲಾದರೋ ಅದಕ್ಕೆಲ್ಲ ಬಿಡುವಿಲ್ಲ. ನೋಡು, ಇಟೇಲಿ, ಅಬಿಸೀನಿಯಾ, ಸ್ಪೇನ್, ಜರ್ಮನಿ, ರಷ್ಯಾ, ಜಪಾನ್ ಮುಂತಾದ ದೇಶ ಗಳಲ್ಲಿ ನಾನೀಗ ಸೃಷ್ಟಿಸಬೇಕಾಗಿರುವ ಜನರ ಆಯುಷ್ಯ ಪ್ರಮಾಣವನ್ನು ಅಲ್ಲಿ ಈ ಮೊದಲು ಸೃಷ್ಟಿಸಿರುವವರ ಆಯುಷ್ಯಾಂತ್ಯಕ್ಕೆ ಅಂತ್ಯವಾಗುವಂತೆ ತರಾಂತರದಲ್ಲಿ ಕಿರಿದು ಮಾಡ ಬೇಕಾಗಿದೆ. ಆದುದರಿಂದ ಹಿಂದಿನ 50 ವರ್ಷಗಳ ಜನನ ಲೇಖನಗಳನ್ನೆಲ್ಲ ತೆಗೆದು ಅಲ್ಲಿ ಲಿಖಿತವಾದ ಆಯುಷ್ಯ ಸಂಖ್ಯೆಗಳಿಗೆ ಇನ್ನು ಮುಂದಿನವೂ ತಾಳಿಬಿದ್ದು ಒಂದೊಂದು ದಿನದಲ್ಲಿ ಸಾವಿರಗಟ್ಟಲೆ ಜನರು ತೀರಿಕೊಳ್ಳುವಂತ ಮರಣದ ದಿನ, ವಾರ, ಗಳಿಗೆ ವಿಗಳಿಗೆಗಳನ್ನೆಲ್ಲ ಲೆಕ್ಕಮಾಡಿ ಹಾಕಬೇಕಾಗಿದೆ. ಈ ಕ್ಷೀರ ಸಾಗರದ ತಂಪಾದ ವಾತಾವರಣದಲ್ಲಿ ಕುಳಿತಿರುವೆನಾದ ಕಾರಣ ನನ್ನ ತಲೆಗಳಿನ್ನೂ ಬಿಸಿಯೇರದೆ ಸಿಡಿಯದೆ ಉಳಿದಿವೆ. ಆದುದರಿಂದ ನಿನ್ನ ಸ್ತೋತ್ರ ಪೀಠಿಕೆಯಿಂದಲೇ ನಾನು ಸಂತುಷ್ಟನಾಗಿದ್ದೇನೆ. ಬಂದಂಥಾ ಕಾರ್ಯವೇನೆಂಬುದನ್ನು ಸಂಕ್ಷೇಪ ವಾಗಿ ಹೇಳುವಂಥವನಾಗು'' ಎಂದು ಬ್ರಹ್ಮನು ಹಣೆಗಳ ಮೇಲಿನ ಬೆವರು ಹನಿಗಳನ್ನು ಒರ ಸೊರಸುತ್ತ ಹೇಳುವಂಥವನಾಗಲು, ನಿಂಬಾಫಲವು ಬಿನ್ನಹಮಾಡುವಂಥಾದ್ದಾಯಿತು. ಅದೆಂ ತಂದರೇ ''ಬ್ರಹ್ಮನೇ, ನಿನ್ನ ಪರಮಾನುಗ್ರಹದಿಂದ ಭೂಲೋಕದಲ್ಲಿ ನನಗೆ ಸದಾ ಸಾರ್ವದಾ ಸ್ವಾಗತವೇ ಎಲ್ಲೆಲ್ಲಿಯೂ! ಆದರೆ ದೊಡ್ಡ ದೊಡ್ಡ ಅಧಿಕಾರಿಗಳು ಊರು ಸಂಚಾರಕ್ಕೆ ಹೊರಟು ನಿಂತಲ್ಲಿ ಕೂತು ಎದ್ದಲ್ಲಿ ಹೊಕ್ಕಲ್ಲಿ ಹೊರಬಂದಲ್ಲಿ ಬಾಲಿಕೆಯರ ಸ್ವಾಗತ ಹಾಡುಗಳನ್ನು ಕೇಳಿ ಕೇಳಿ ಅವರಿಗೆ ಜುಗುಪ್ಸೆ ಬಂದಂತೆ ನನಗೂ ಅಂಥಾ ದೊಡ್ಡ ದೊಡ್ಡ ಜಂಟೀಲ್ ಮ್ಯಾನರ ಮೇಜಿಯ ಮೇಲೆ ಚಿಕ್ಕ ಮನುಷ್ಯರು ನನ್ನನ್ನು ಇರಿಸಿದಾಗ ಅವರು ಹೇಳುವ ಥೇಂಕ್ಸ್ ಥೇಂಕ್ಸ್ ಕೇಳಿ ಕೇಳಿ ಬೇಸರವಾಗುತ್ತ ಬಂದದೆ. ಆದುದರಿಂದ ದೊಡ್ಡವರೆಂಬವರೆಲ್ಲ ಕೆಲವು ದಿವಸಗಳ ಮಟ್ಟಿಗಾದರೂ ನನ್ನನ್ನು ಕಂಡಾಗ ಇದೇಕೆ ಬಂತಪ್ಪಾ ಶನಿ! ಎಂದು ಮೋರೆ ಗಂಟಿಕ್ಕುವ ಚಂದ ನನಗೆ ನೋಡಬೇಕಾಗಿದೆ. ನಾನವರ ಮೇಜಿನ ಮೇಲೆ ಏರಿ ಕುಳಿತರೂ ಅವರೆನ್ನನ್ನು ಮುಟ್ಟದೆ ಹಿಂದೆ ಕಳುಹು ವಂಥವರಾಗಬೇಕು. ನಾನು ಬರುವ ಸಂಚು ಮುಂಚಿತವಾಗಿ ಗೊತ್ತಾದರೆ ನನಗೆ ಭೇಟಿಕೊಡದೇ ತಲೆಮರೆಸಿಕೊಳ್ಳಬೇಕು. ಎಂದು ಹೇಳುತ್ತಿರುವಷ್ಟರಲ್ಲೇ ಬ್ರಹ್ಮನು (ಸಾಕು! ಸಾಕು! ಹೆಚ್ಚಿಗೆ ಹೇಳಲೂ ಕೇಳಲೂ ಇದು ಸಮಯವಲ್ಲ. ಆದರೆ ನಿನ್ನ ಬಯಕೆಯೇ ನೆಂದು ಗೊತ್ತಾಯಿತು. ಅದನ್ನು ನೆರವೇರಿಸಿಕೊಡುತ್ತೇನೆ. ಮುಂದೆ ಧಾತ್ರ ಸಂವತ್ಸರದಲ್ಲಿ ವ್ಯಾಪಾರದ ಮುಗ್ಗಟ್ಟಿನಿಂದ ಸಾಹುಕಾರರು ಹಾಕಳಿಸುತ್ತ ಅಂಗಡಿಯಲ್ಲಿ ಕುಳಿತು ಕೊಳ್ಳುತ್ತಲೂ, ರೋಗಿಗಳು ಕೈಯಲ್ಲಿ ಕಾಸಿಲ್ಲದೆ ಹಾಸಿಗೆಯಲ್ಲಿ ನರಳುತಿದ್ದು ಡಾಕ್ಟರರು ಚಿಕಿತ್ಸಾಲಯದಲ್ಲಿ ವಾಯುಸೇವನೆ ಗೈಯ್ಯುತ್ತಲೂ, ಕುಕ್ಷಿಗಿಲ್ಲದೆ ವಕೀಲರು ಕಕ್ಷಿಗಾರರ ಹಾದಿ ನೋಡುತ್ತಲೂ, ನೌಕರರು ಸಂಬಳದ ಪಾರ್ಸಿಬಡ್ಡಿಯ ಹೊಡೆತಕ್ಕೋ ಕಟ್ಟಿನ ಪೆಟ್ಟಿಗೋ ಚಟ್ಟಾಗಿ ಕೊರಗುತ್ತಲೂ, ಧನಿಗಳು ಹುಟ್ಟುವಳಿಯಿಂದ ಕಂದಾಯ ತೆರುವುದೇ ಕಷ್ಟವಾಗಿ ಸಾಲದ ಬಡ್ಡಿ ಬೆಳೆಯಿಸುತ್ತಲೂ, ಮನೆಮನೆಗಳಲ್ಲಿ ಮುನ್ಸಿಪಾಲಿಟಿಯ ತೆರಿಗೆ ತೆರಲಿಕ್ಕೆ ಚೆರಿಗೆ ಮಾರೋಣವೇ ಎಂದು ಯೋಚಿಸುತ್ತಲೂ ಇರುವಾಗ ದಸರಾ ಬರುತ್ತದೆ! ಆಗ ನೀನು ತಾಲ್ಲೂಕು ಪೇದೆಗಳ ಮುನ್ಸಿಫ್ ಕೋರ್ಟು ಜವಾನರ, ಟಪ್ಪಾಲ್ ಬಟವಾಡೆಯವರ ಇತ್ಯಾದಿ ವರ್ಗಕ್ಕೆ ಸೇರಿದವರೆಲ್ಲರ ಜೇಬಿ ನಲ್ಲಿ ಮೂಗೊರಸಿದ ಕರವಸ್ತ್ರದಡಿಯಲ್ಲಿ ಅಡಗಿದ್ದು ಪೂರ್ವೋಕ್ತ ಮಹಾಶಯರ ಮೇಜುಗಳ ಮೇಲೆ ಹಾರಿ ಕುಳಿತುಕೊಳ್ಳುವಂಥವನಾಗು. ಆಗ ನಿನ್ನ ಮನೋಭಿಷ್ಟವು ನೆರವೇರುತ್ತದೆ'' ಎಂದು ಬ್ರಹ್ಮನು ಅಭಯವಚನವನ್ನು ದಯಪಾಲಿಸಿ ನಿಂಬಾಫಲವನ್ನು ಕಳುಹಿಸಿ ಕೊಡು ವಂಥವನಾದ. ಇತಿ ಉತ್ತರ ಭವಿಷ್ಯತ್ಪುರಾಣೇ ನಭೂತೋನ ಭವಿಷ್ಯತ್ಖಂಡೇ ಮಧ್ಯಾಂತ್ಯೆ ನಿಂಬಾಫಲ ಮಾಹಾತ್ಮ ಪರಿಪೂರ್ಣಮಸ್ತು! ವಾಚಕಹೃದಯಾ ಮೋದಮಸ್ತು! ಸರ್ವೇ ಜನಾಸ್ಸುಖಿ ನೋಭವಂತು! ಓಂ! ಶಾಂತಿ ಶಾಂತಿಶ್ಯಾಂತಿಃ!

## ನಿರ್ಧಾರ

ಒಮ್ಮೆ ಒಂದು ಪಕ್ಷಿ, ಗೂಡಿನಲ್ಲಿಟ್ಟ, ಮೊಟ್ಟೆಯನ್ನು ದಿಟ್ಟಿಸಿ ನೋಡುತಿತ್ತು. ಈ ಮೊಟ್ಟೆಯಿಂದ ಹೊರ ಬರುವ ನನ್ನ ಮರಿ ಹಕ್ಕಿ, ಎಷ್ಟು ಕಠಿಣ ಜಗತ್ತನ್ನು ಎದುರಿಸಬೇಕೆಂದು ಯೋಚಿಸುತಿತ್ತು. ಗಾಳಿ-ಮಳೆ, ಗುಡುಗು-ಮಿಂಚು, ಶತ್ರುಮಿತ್ರರ ಹಾವಳಿಯಿಂದ ಹೇಗೆ ನನ್ನ ಈ ಪುಟ್ಟ ಕಂದಮ್ಮನನ್ನು ಸಂರಕ್ಷಿಸಲಿ ಎಂದು ಚಿಂತೆಗೊಳಗಾಯಿತು. ಮೊಟ್ಟೆ ಒಳಗಿಂದ ಮರಿಯೂ ತಾಯಿಯ ಗಾಭರಿಯ ಆತಂಕಕ್ಕೆ ಓಗೊಟ್ಟು ತನ್ನ ಭಯವನ್ನು ವ್ಯಕ್ತಪಡಿಸಿತು.

''ಅಮ್ಮಾ! ನನಗೆ ಹೊರಗೆ ಬರಲು ಬಹಳ ಭಯವಾಗುತ್ತಿದೆ'' ಎಂದಿತು.

''ಮಗು, ನೀ ಭಯ ಪಡಬೇಡ. ನಾನು, ಕಟ್ಟಿರುವ ಮೊಟ್ಟೆಯ ಕೋಟೆಯಲ್ಲಿ ನೀ ಹಾಯಾಗಿರು. ನೀನು ಈ ಕಷ್ಟದ ಪ್ರಪಂಚಕ್ಕೆ ಬಂದು ಕಷ್ಟ ಪಡುವುದು ಬೇಡ'' ಎಂದಿತು ತಾಯಿ ಹಕ್ಕಿ.

ದಿನವೂ ತಾಯಿಹಕ್ಕಿ, ಆಗಸದಾದ್ಯಂತ ಹಾರಾಡಿ ಬಂದು ಮೊಟ್ಟೆ ಒಳಗಿನ ಮರಿಮಗುವಿಗೆ ಎಲ್ಲಾ ಸುದ್ದಿ ಹೇಳುತ್ತಿತ್ತು. ವನದಲ್ಲಿ ಬಿಟ್ಟ ಮೊಗ್ಗು, ಹೂಗಳ ಬಗ್ಗೆ, ಎಲೆ, ಕಾಯಿ, ಹಣ್ಣುಗಳ ಬಗ್ಗೆ ವರ್ಣಿಸಿ ಹೇಳುತ್ತಿತ್ತು. ಋತುಗಳ ಬದಲಾವಣೆಯಾದಾಗಲೂ ಎಲ್ಲಾ ವರದಿ ಒಪ್ಪಿಸುತ್ತಿತ್ತು.

ಮಳೆ ಬಂದಾಗ ''ಮಗು ನಿನ್ನ ತೋಯದಂತೆ ಮಾಡಿರುವೆ ಅಲ್ಲವೇ?'' ಎಂದಿತು.

''ಅಮ್ಮಾ! ಮಳೆ ಎಂದರೇನು? ಮಿಂಚು ಅಂದರೇನು? ನೋಡಬೇಕು ಅನಿಸುತ್ತಿದೆ. ವನದ ಹೂವು, ಹಣ್ಣು ಎಲ್ಲಾ ನೋಡಬೇಕು ಅನ್ನಿಸುತ್ತಿದೆ.'' ಎಂದು ಮರಿಹಕ್ಕಿ ಅಮ್ಮನಲ್ಲಿ ಹೇಳಿ ಕೊಂಡಿತು. ''ಮಗು! ಹೋಗಲಿ ನಿನ್ನ ಮೊಟ್ಟೆಯ ಕೋಟೆಗೆ ಬಂದು ಸಣ್ಣ ಕಿಡಕಿಯ ತೂತು ಮಾಡುತ್ತೇನೆ. ನೀನು ಅದರಿಂದ ಜಗವನ್ನು ನೋಡು'' ಎಂದಿತು.

ಮೊಟ್ಟೆ ತೂತಿನ ಕಿಡಕಿಯಿಂದ ಮರಿಹಕ್ಕಿ ಜಗವನ್ನು ನೋಡಲಾರಂಭಿಸಿತು. ಜಗದ ಬಿಸಿಲ ಕಿರಣ, ಬೆಳದಿಂಗಳು, ಮಂದಮಾರುತ, ಎಲ್ಲವೂ ಕಿಡಕಿಯಿಂದ ಒಳಹೊಕ್ಕು ಮರಿಹಕ್ಕಿಯನ್ನು ಮೋಹಿಸಿದವು. ಮರಿಗೆ ಜಗದಲ್ಲಿ ಮೋಹ ಹುಟ್ಟಿತು.

ಜಗದ ಮೋಹಕತೆ ಜೊತೆಗೆ ಚಿಕ್ಕ ಹುಳು ಹುಪ್ಪಟೆಗಳು ಮೊಟ್ಟೆ ಒಳಗೆ ಬಂದು ಮರಿ ಹಕ್ಕಿಯನ್ನು ಕಾಡಲಾರಂಭಿಸಿದವು. ಮರಿಗೆ ಮೊಟ್ಟೆಯ ಕೋಟೆಯಲ್ಲಿ ಉಸಿರುಕಟ್ಟಲಾರಂಭಿಸಿತು. ಒಂದು ದಿನ ''ಅಮಾ!'' ಎಂದು ಚೀರಿಕೊಂಡು ಮೊಟ್ಟೆಯಿಂದ ಹೊರಬಂದಿತು.

ತಾಯಿ ಹಕ್ಕಿ ''ಇದೇನು ಕೆಲಸ ಮಾಡಿದೆ ಲಕ್ಷ್ಮಣ ರೇಖೆಯಂತೆ ಇದ್ದ ಮೊಟ್ಟೆ ಹೊಸಿಲು ದಾಟಿ ಬಂದು ಬಿಟ್ಟೆಯಾ? ಮರಿಹಕ್ಕಿ'' ಎಂದಿತು. ''ಅಮ್ಮಾ! ಮೊಟ್ಟೆಯಲ್ಲಿ ಕಣ್ಣುಮುಚ್ಚಿ ಕೂತರೆ ನನ್ನ ರೆಕ್ಕೆ ಬಲಿಯುವುದೇ? ನಾನು ಆಗಸ ನೋಡುವುದೆಂದು? ಭೂಮಿ ಸುತ್ತುವುದೆಂದು? ನಿನ್ನ ರೆಕ್ಕೆಯ ನೆರಳಿರುವಾಗ ಮೊಟ್ಟೆಯ ಕೋಟೆ ಏಕೆ?'' ಎಂದು ಮೆತ್ತ ಮೆತ್ತಗೆ ಹಾರುತ್ತ ಆಗಸ ಸೇರಿತು.

ತಾಯಿಹಕ್ಕಿ ಆನಂದ ಬಾಷ್ಪ ಸುರಿಸುತ್ತ ಕಂದಮ್ಮನ ಸಾಹಸವನ್ನು ಮೆಚ್ಚಿಕೊಂಡಿತು. ಆಗಸದ ಸೂರು, ಭೂಮಿಯ ನೆಲೆ, ವೃಕ್ಷದ ಗೂಡು ಕೊಟ್ಟಿರುವ ದೈವ ಇರುವವರೆಗೆ ನನಗೇಕೆ ನನ್ನ ಮರಿಯ ಚಿಂತೆ ಎಂದು ಅರಿತುಕೊಂಡಿತು ತಾಯಿ ಹಕ್ಕಿ.

## ಒಂದು ಒಳ್ಳೆಯ ನುಡಿ




ಶೋಕೋ ನಾಶಯತೇ ಧೈರ್ಯಂ ಶೋಕೋ ನಾಶಯತೇ ಶ್ರುತಂ/

ಶೋಕೋ ನಾ ಶಯತೇ ಸರ್ವಂ ನಾಸ್ತಿ ಶೋಕಸಮೋ ರಿಪು://

ದು:ಖವೆಂಬುದು ನಮ್ಮಲ್ಲಿರುವ ಧೈರ್ಯ ವನ್ನು ಮತ್ತಷ್ಟು ಕುಗ್ಗಿಸುತ್ತದೆ. ಏನು ಮಾಡ ಬೇಕೆಂದೇ ತೋಚುತ್ತಿಲ್ಲ ಎನ್ನುವಷ್ಟರ ಮಟ್ಟಿಗೆ ಹತಾಶರಾಗುತ್ತೇವೆ. ಭಗವಂತನಿದ್ದಾನೆ, ಹಾಲಲ್ಲಿ ಅಥವಾ ನೀರಲ್ಲಿ ಹಾಕು ನೀನೇ ಗತಿ ಎಂದು ಶರಣು ಹೋಗುವುದನ್ನು ಆ ಕ್ಷಣಕ್ಕೆ ಮರೆತು ಬಿಡು ತ್ತೇವೆ. ವಿವೇಚನೆ ಎನ್ನುವುದು ಶೂನ್ಯವಾಗಿ ಬಿಡುತ್ತದೆ. ಜ್ಞಾನವನ್ನು ಮೋಡದಂತೆ ಮುಸುಕಿ ಎಲ್ಲವನ್ನೂ ನಾಶಮಾಡುತ್ತದೆ. ಶೋಕ ಎನ್ನುವುದು ಶತ್ರುವಿನಂತೆ, ರಾಗ-ದ್ವೇಷಗಳಿಂದ ದೂರ ವಿದ್ದು, ಭಗವತ್ ಚಿಂತನೆ, ಉತ್ತಮರ ಸಂಗ, ಒಳ್ಳೆಯ ಪುಸ್ತಕಗಳ ಓದು, ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ತಲ್ಲೀನ, ಬಂಧುಬಾಂಧವರ ಭೇಟಿ ಇದೆಲ್ಲ ಶೋಕವನ್ನು ಶಮನ ಮಾಡ ಬಹುದು. ಧ್ಯಾನ ಅತ್ಯಂತ ಪ್ರಬಲ ಅಸ್ತ್ರ. ಸತ್ಯವಂತರಾದ ಜೀವನದ ಹಾದಿ, ಸತ್ಯವೇ ದೇವರು, ಸತ್ಯವೇ ಧೈರ್ಯ, ಸತ್ಯದಲ್ಲಿ ಲಕ್ಷ್ಮೀದೇವಿ ನೆಲೆಸಿದ್ದಾಳೆಂಬ ನಂಬಿಕೆ ನಮಗಿರಬೇಕು, ನಮ್ಮ ಹಿರಿಯರು ಇದನ್ನು ಹೇಳುತ್ತಿದ್ದರು. ಎಷ್ಟೇ ಕಷ್ಟ, ದು:ಖ, ನೋವಾದರೂ ಸತ್ಯವನ್ನು ಬಿಡಬಾರ ದೆಂದು. ಕೆಸರು, ಕೊಳಕು, ಕೊಚ್ಚೆ ಕಂಡಾಗ ಸ್ವಲ್ಪ ಸರಿಯುತ್ತೇವೆ. ಅದೇ ರೀತಿ ಬೇಡದ ಬಯಕೆ ಗಳಿಂದ ದೂರ ಸರಿದಾಗ ಶೋಕ ಹತ್ತಿರ ಬಾರದು. ನೀರಿನ ಜೊತೆ ಕೆಸರು ಸಹಜ, ಹಾಗೆಯೇ ದು:ಖದ ಜೊತೆ ಸುಖವೂ ಇದೆ. ನಮ್ಮ ಅರಿವಿಗೆ ಬರುವಾಗ ಸ್ವಲ್ಪ ತಡವಾಗುವುದೇ ಕಾರಣ.

ಪ್ರಪಂಚದ ಆಗುಹೋಗುಗಳು ಏನೆಂಬುದನ್ನು ಅರ್ಥೈಸಿಕೊಂಡು, ನಮಗೆ ನಾವೇ ಸಮಾಧಾನಪಟ್ಟು ಕೊಳ್ಳುವುದನ್ನು ಕಲಿಯಬೇಕು. ಕಷ್ಟದ ಕಾರಣವನ್ನು ತುಂಬಾ ಆತ್ಮೀಯರಲ್ಲಿ ಹೇಳಿ, ಮನಸ್ಸನ್ನು ಹಗುರ ಮಾಡಿಕೊಂಡಾಗ ದು:ಖ ಶಮನವಾಗಬಹುದು, ಏನಾದರೂ ಪರಿಹಾರ ಸಿಗಬಹುದು. ಸ್ನೇಹಿತರೇ, ಇರುವಷ್ಟು ದಿನ ಉತ್ತಮ ಜೀವನ ನಮ್ಮದಾಗಲು ಪ್ರಯತ್ನಿಸೋಣ.

**-ರತ್ನಾ ಕೆ.ಭಟ್, ತಲಂಜೇರಿ**

## ಮಯೂರ ಹಾಸ್ಯ



### ಯಾವ ಕಡೆಯವರು?

ಸಮಾರಂಭ ಒಂದರಲ್ಲಿ ಭೋಜನಾಲಯದ ಮೇಲ್ವಿಚಾರಕರು ಅಂದಿನ ಭೋಜನದ ವ್ಯವಸ್ಥೆಯನ್ನು ವೀಕ್ಷಿಸುತ್ತಿದ್ದರು. ಪಂಕ್ತಿಯಲ್ಲಿ ಕುಳಿತ ಇಬ್ಬರು ವ್ಯಕ್ತಿಗಳ ಸಂಭಾಷಣೆ ಅವರ ಕಿವಿಗೆ ಬಿತ್ತು. ಒಬ್ಬರು ಇನ್ನೊಬ್ಬರಿಗೆ ಕೇಳುತ್ತಿದ್ದರು.

ಏನ್ಸಾರ್? ನೀವು ಯಾವ ಕಡೆಯವರು? ಎಂದ ಒಬ್ಬ-ಇನ್ನೊಬ್ಬ, ನಾನೇ? ನಾನು ಗಂಡಿನ ಕಡೆಯವನು... ನೀವು? ಎಂದ. ಆ ಮತ್ತೊಬ್ಬ ಸ್ವಲ್ಪವೂ ಯೋಚಿಸದೆ. ಮದುಮಗಳು ನನ್ನ ಸೋದರಮಾವನ ಬೀಗರ ಕಡೆಯವಳು ಎಂದ. ಇದನ್ನು ಆಲಿಸಿದ ಮೇಲ್ವಿಚಾರಕ, ಸ್ವಾಮಿ, ಇದು ನಾಮಕರಣ ಸಮಾರಂಭ ಎಂದ.

**-ಜಯಮಾಲಾ ಪೈ**

### ಒಂದೇ ಬೆಕ್ಕು

ಒಂದನೇ ತರಗತಿ ಓದುತ್ತಿರುವ ಸುಪರ್ಣ ನಮ್ಮ-ಮನೆ ಪಕ್ಕದ ಮುದ್ದು ಹುಡುಗಿ. ಅವತ್ತು ಟೀಚರ್ ಮೇಲೆ ಸಿಟ್ಟು ಮಾಡಿಕೊಂಡು ಬಂದಿದ್ದಳು. ಏನಾಯ್ತು ಎಂದು ಕೇಳಿದೆ. ಆಂಟಿ, ಮೇಡಂ ಒಂದು ಪ್ರಶ್ನೆ ಕೇಳಿದ್ರು, ನಿನಗೆ ಮೊನ್ನೆ ಎರಡು ಬೆಕ್ಕು, ನಿನ್ನೆ ಎರಡು ಬೆಕ್ಕು ಕೊಟ್ಟಿದ್ದೆ. ಇವತ್ತು ಮತ್ತೆ ಎರಡು ಬೆಕ್ಕು ಕೊಡ್ತೀನಿ, ಹಾಗಾದ್ರೆ ನಿನ್ನ ಬಳಿ ಒಟ್ಟು ಎಷ್ಟು ಬೆಕ್ಕು ಆದವು? ಅಂತ. ನಾನು ಒಂದು ಅಂದೆ. ನೀನು ಗಣಿತದಲ್ಲಿ ಜಾಣೆ ಅಲ್ಲವೆ? ಅದ್ದೇಗೆ ತಪ್ಪು ಉತ್ತರ ಕೊಟ್ಟೆ? ಅಂದೆ. ಇಲ್ಲ ಆಂಟಿ, ನಾನು ತಪ್ಪು ಹೇಳಿಲ್ಲ, ಸುಳ್ಳು ಹೇಳಿದ್ದು ಅವರೇ. ಮೊನ್ನೆ ಎರಡು, ನಿನ್ನೆ ಎರಡು ಬೆಕ್ಕು ಕೊಟ್ಟೆ ಅಂತ ಹೇಳಿದ್ದ ಸುಳ್ಳು, ಇವತ್ತು ಎರಡು ಬೆಕ್ಕು ಕೊಡೋಕಂತೂ ಸಾಧ್ಯ ಇಲ್ಲ. ಹೀಗಾಗಿ, ನಮ್ಮನೆಯಲ್ಲಿ ಇರೊ ಒಂದು ಬೆಕ್ಕು ಮಾತ್ರ ಸತ್ಯ. ಅದಕ್ಕೇ ನಾನು ಒಂದು ಎಂದೆ.

**-ಅನುಪಮಾ ವಿ.ಎಸ್.**

### ಇಲ್ಲೇ ನೆಗೆದು ಬಿದ್ರೆ ಸಿಗುತ್ತೆ

ವಿದೇಶದಲ್ಲಿಯೇ ಹುಟ್ಟಿ ಬೆಳೆದ ಮಧು ಇತ್ತೀಚೆಗೆ ಅಜ್ಜಿಯ ಮನೆಗೆ ಬಂದು, ಕನ್ನಡ ಕಲಿತು ಮಾತಾಡ್ತಿದ್ದಳು. ಅದೊಂದು ದಿನ ಅಪ್ಪ, ಅಮ್ಮನಿಗೆ ಬಹಳ ಪರಿಚಿತರಾಗಿದ್ದ ದಂಪತಿ ಮನೆಗೆ ಬಂದಿದ್ದರು. ಕೆಲ ಹೊತ್ತು ಮಾತುಕತೆ, ತಿಂಡಿ, ಉಪಚಾರ ಎಲ್ಲಾ ಮುಗಿದ ಮೇಲೆ ವಾಪಸ್ಸು ಮನೆಗೆ ಹೊರಡಲು ನಿಂತರು. ಸ್ವಲ್ಪ ಸಂಜೆಯಾಗಿದ್ದರಿಂದ ಹೋಗುವುದು ಹೇಗೆ ಎನ್ನುವ ಬಗ್ಗೆ ಮಾತುಕತೆ ನಡೆದಿತ್ತು.

ಆಟೋರಿಕ್ಷಾ ಎಲ್ಲಿ ಸಿಗುತ್ತೆ? ಎಂದು ಕೇಳಿದಳು. ಇನ್ನೂ ಅಮ್ಮ ಉತ್ತರಿಸುವುದರೊಳಗೆ ಮಧು, ಅಯ್ಯ, ಅದಕ್ಕೇನು ಅಂಟಿ, ಇಲ್ಲೇ ಎರಡು ಹೆಜ್ಜೆ ನೆಗೆದು ಬಿದ್ರೆ ಸಾಕು... ಬೇಕಾದಷ್ಟು ಆಟೋರಿಕ್ಷಾ ಸಿಗುತ್ತೆ... ಅಂದಿದ್ದೇ ತಡ ನೆಂಟರು ಗಾಬರಿಯಾದರು. ಕೂಡಲೇ ಅವರಮ್ಮ, ಮಿಸ್ಟೇಕ್ ಮಾಡ್ಕೊಬೇಡಿ, ಇಲ್ಲೇ ಎರಡ್ಡೆಜ್ಜೆ ಎಡವಿ ಬಿದ್ರೆ... ಅನ್ನೋಕೆ ಹೋಗಿ, ಹಾಗೆ ಅಂದಿ ದ್ದಾಳೆ. ಕನ್ನಡ ಇನ್ನೂ ಪೂರ್ತಿ ಬರಲ್ಲ ಅಲ್ವಾ? ಏನೊ ಪ್ರಯತ್ನ ಮಾಡ್ತಾ ಇದ್ದಾಳೆ ಎಂದು ಸಮಾಧಾನ ಮಾಡಿದಳು. ದಂಪತಿ ಪೆಚ್ಚು ನಗೆ ನಗುತ್ತಾ, ಪಾಪ, ಕನ್ನಡ ಮಾತಾಡಬೇಕು ಅನ್ನೊ ಮನಸಿದೆಯಲ್ಲ ಅದು ಮುಖ್ಯ. ಇಲ್ಲೇ ಇದ್ದುಕೊಂಡು ಕನ್ನಡ ಮರೀತಾ ಇರೋರು ಎಷ್ಟೊಂದು ಜನ ಇದ್ದಾರೆ ಅಲ್ವಾ? ಎನ್ನುತ್ತ ಆಚೆ ನಡೆದರು.

**-ಸುಮನಾ**

### ನಂಬಿಕೆ...

ಪರಮೇಶಿಗೆ ಅರ್ಜೆಂಟಾಗಿ ಖರ್ಚಿಗೆ ದುಡ್ಡು. ಬೇಕಾಗಿತ್ತು. ಆ ದಿನ ಭಗವಂತನಿಗೆ, ಹೇ ಭಗವಂತಾ... ನಿನ್ನ ಕೃಪೆಯಿಂದ ನನಗೆ ಒಂದು ಸಾವಿರ ರೂಪಾಯಿ ದೊರೆತರೆ ಅದರಲ್ಲಿ ಅರ್ಧ ಪಾಲು, ಅಂದರೆ ಐನೂರು ರೂಪಾಯಿ ನಿನಗೇ ಅರ್ಪಿಸುವೆ ಎಂದು ಕಳಕಳಿಯಿಂದ ಕೇಳಿ ಕೊಂಡ. ಕಾಕತಾಳೀಯ ಎಂಬಂತೆ ಕೆಲ ನಿಮಿಷಗಳ ತರುವಾಯ ಆತ ಹೋಗುತ್ತಿದ್ದ ದಾರಿಯಲ್ಲಿ ಐನೂರು ರೂಪಾಯಿಯ ಹೊಸ ನೋಟು ಬಿದ್ದಿರುವುದನ್ನು ಕಂಡವ ಫಕ್ಕನೆ ಎತ್ತಿಕೊಳ್ಳುತ್ತ ಮತ್ತೆ ಭಗವಂತನಿಗೆ ಇದೇನು ಭಗವಂತಾ... ನಾನೇನು ಅಷ್ಟು ನಂಬಿಕೆಗೆ ಅನರ್ಹನಾದೆನೆ? ನಿನ್ನ ಪಾಲನ್ನೂ ಮುರಿದುಕೊಂಡು ದಯಪಾಲಿಸಿರುವೆಯಲ್ಲಾ ಎನ್ನುತ್ತಲೇ ಜೇಬಿಗಿಳಿಸಿ ಮುಂದೆ ಸಾಗಿದ.

**-ಅರವಿಂದ ಜಿ. ಜೋಷಿ**

### ಊರ ಮಧ್ಯ

ರಾಜ ಘೋಷಣೆ ಹೊರಡಿಸಿದ ಊರಿನ ಮಧ್ಯದಲ್ಲೊಂದು ಆಸ್ಪತ್ರೆ ಕಟ್ಟಿಸಿ, ಅದರ ಪಕ್ಕದಲ್ಲಿ ಒಂದು ಸ್ಮಶಾನ ನಿರ್ಮಿಸಿ, ಅಲ್ಲೇ ಉದ್ಯಾನವನವು ಇರಲಿ. ಜನ ಪ್ರತಿಯೊಂದನ್ನು ನೋಡುತ್ತಾ ಓಡಾಡುತ್ತಿರಬೇಕು. ಆಗಾಗ ಎಲ್ಲವೂ ಕಣ್ಣು ಮುಂದೆ ಕಾಣುತ್ತಿರಬೇಕು. ತಾವು ಸಂಗ್ರಹಿಸಿ ಇಟ್ಟಿದ್ದು ಕೊನೆಯವರೆಗೂ ಬರುವುದಿಲ್ಲ, ತಮ್ಮ ಅಹಂಕಾರಗಳೆಲ್ಲವೂ ಒಂದಲ್ಲ ಒಂದು ದಿನ ಬೂದಿಯಾಗುತ್ತದೆ, ಭೂಮಿ ಬಿಟ್ಟು ಹೊರಟಾಗ ಏನನ್ನು ಕೊಂಡೊಯ್ಯುವುದಿಲ್ಲ. ವ್ಯಕ್ತಿತ್ವಗಳು ಮಾಡಿದ ಒಳ್ಳೆಯ ಕೆಲಸಗಳು ಕೊನೆಯವರೆಗೂ ಉಳಿಯುತ್ತವೆ. ಇದಿಷ್ಟನ್ನು ಅರಿತುಕೊಳ್ಳಬೇಕು ಸಿಕ್ಕಾಗ ಸಂಭ್ರಮ ಪಟ್ಟು ನೋವುಂಟಾದಾಗ ಎಲ್ಲವನ್ನು ಮರೆತು ಮುನ್ನುಗ್ಗುವ ಧೈರ್ಯ ಮನಸೊಳಗೆ ಮೂಡಬೇಕು. ಅನ್ನೋದರ್ಥವಾಗಲು ಎಲ್ಲವನ್ನು ಕಟ್ಟಿಸಿಬಿಟ್ಟ ಎಲ್ಲವೂ ಜನರ ಕಣ್ಣ ಮುಂದೆ ನಡೀತಾ ಇದ್ರು ಕೂಡ ಯಾರು ಬದಲಾಗಲೇ ಇಲ್ಲ .ಯಾರು ಮನಸ್ಸಿಗೆ ತೆಗೆದುಕೊಳ್ಳಲೇ ಇಲ್ಲ .ರಾಜನ ಯೋಚನೆ ಯೋಜನೆಯಾಗಲೇ ಇಲ್ಲ. **-ಧೀರಜ್ ಬೆಳ್ಳಾರೆ**

## ಗುಡ್ಡಕಾಡಿನ-ರಾಜ್ಯಭಾರ



ಅದೊಂದು ಬೆಟ್ಟಗುಡ್ಡಕಾಡು, ಅಲ್ಲಿ ಗುಡ್ಡ ಕಲ್ಲುಗಳ ರಾಜ್ಯಭಾರ. ನಡೆದು ಬರುತ್ತಾ ಒಮ್ಮೆ ನಾನೂ ಈ ಬೆಟ್ಟಗುಡ್ಡಗಳ ರಾಜ್ಯದಲ್ಲಿ ಹೆಜ್ಜೆ ಇಟ್ಟೆ. ಮೊದಲಿಗೆ ನನಗೆ ಹೆದರಿಕೆಯಾಯಿತು.

''ಅಬ್ಬಾ! ಇದೆಷ್ಟು ದೊಡ್ಡ ಬೆಟ್ಟ ಗುಡ್ಡಗಳು'' ಎನಿಸಿತು. ಇವುಗಳ ಭಾರ, ಘನತೆ, ತೂಕ ಎಲ್ಲಾ ನನ್ನ ಭಾವಗಳನ್ನು ಕೆದಕಿತು. ಈ ಬೆಟ್ಟಗುಡ್ಡಗಳ ಕಾರ್ಯ ಭಾರ ಬಹಳ ಕಠಿಣವಿರಬೇಕೆಂದೆನಿಸಿತು. ಎಷ್ಟಾದರೂ ಕಲ್ಲುಗಳು ಇವು ಅಲ್ಲವೇ? ಇವುಗಳಿಗೆ ಹೃದಯವೆಲ್ಲಿ? ಇವು ಬರಿ ಬರಡು. ಬಂಡೆ ಮೈಯನ್ನು ಪ್ರಕೃತಿಗೆ ಒಡ್ಡಿ ಜಡವಾಗಿ ಯುಗದ ಉದ್ದಕ್ಕೂ ಬಿದ್ದಿರುವ ಇವುಗಳಿಂದ ಏನು ಪ್ರಯೋಜನ? ಎಂದೆಲ್ಲಾ ಯೋಚಿಸುತ್ತಿರುವಾಗ, ನನ್ನ ಹಿಂಬದಿಯಲ್ಲಿ ಕೂಡಲು ಆಸನದಂತಿದ್ದ ಗುಡ್ಡದಬಂಡೆ ನನ್ನ ಸ್ವಾಗತಿಸಿತು. ಆತ್ಮೀಯತೆ, ಆದರ ತೆಯಿಂದ ನನ್ನ ಕುಳ್ಳಿರಿಸಿತು. ನಡೆದು, ಸೋತ ನನ್ನ ಕಾಲುಗಳು ಪ್ರೀತಿಯ ಕರೆಯೋಲೆಗೆ ಸ್ಪಂದಿಸಿಯೋ ಎಂಬಂತೆ ಕುಳಿತು ಸುತ್ತ ನೋಡುತ್ತಿದ್ದೆ. ಆ ಬೆಟ್ಟಗುಡ್ಡಗಳ ವೈವಿಧ್ಯತೆ, ರೂಪ, ಸೌಂದರ್ಯ, ನುಣುಪು ಹೊಳಪು, ಆಕಾರ ಎಲ್ಲಾ ನನ್ನ ಮನವನ್ನು ಆಕ್ರಮಿಸಿತು. ಒಂದು ದೊಡ್ಡ ಬಂಡೆ, ಚಿಕ್ಕಬಂಡೆಯನ್ನು ತೊಡೆಯಲ್ಲಿಟ್ಟು ಕೂತಿತ್ತು ತಾಯಿ ಮಗುವಿನಂತೆ, ಪಕ್ಕದಲ್ಲಿ ಎರಡು ಸುಂದರ ನಿಲುವುಳ್ಳ ಗುಡ್ಡಗಳು ಪ್ರೇಮಿಗಳಂತೆ ಅತಿ ಸನಿಹದಲ್ಲಿ ನಿಂದು ಒಂದನ್ನೊಂದು ಮುತ್ತಿಕ್ಕುತ್ತಿದ್ದವು. ಮತ್ತೆ ಕೆಲವು ಒಂದರ ಮೇಲೊಂದು ಏರಿ ಸೃಷ್ಟಿ ಮಿಲನದ ಮಾಧುರ್ಯ ಸವಿಯುತ್ತಿದ್ದವು.

ಕೆಲವು ಗುಡ್ಡ ಬಂಡೆಗಳು ವಿರಕ್ತರಂತೆ ಏಕಾಂಗಿಗಳಾಗಿ ತಪದಲ್ಲಿದ್ದವು. ಮತ್ತೆ ಕೆಲವು ದೈವೀ ರೂಪದಲ್ಲಿ ರಾರಾಜಿಸುತಿತ್ತು. ಮತ್ತೆ ಕೆಲವು ದೊಡ್ಡ ಚಿಕ್ಕ ಬಂಡೆ ಗಳು ಒಟ್ಟು ಸೇರಿ ಸೃಷ್ಟಿಯ ನಿಗೂಢತೆ ಅರಿಯಲು ಸಮ್ಮೇಳನ ಮಾಡುತ್ತಿದ್ದವು.

ಇನ್ನು ಕೆಲವು ಸಸ್ಯ ಪ್ರೇಮಿಗಳಾಗಿ ಹುಲ್ಲು ಗಿಡಗಳ ಬಗಲಲ್ಲಿ ಕುಳಿತು ಅವು ಗಳೊಡನೆ ಸಮರಸದಿಂದ ಬಾಳುತ್ತಿದ್ದವು. ಇನ್ನು ಕೆಲವು ಭೂಮಿ ತಾಯಿಯ ತೊಡೆಯ ಮೇಲೆ ದೀರ್ಘ ನಿದ್ದೆಯಲ್ಲಿದ್ದವು. ಇನ್ನು ಕೆಲವು ದಾರ್ಶನಿಕ ಬಂಡೆ ಗಳು ಆಗಸದ ಎತ್ತರಕ್ಕೆ ತಲೆಎತ್ತಿ ಸೃಷ್ಟಿಯ ಚಿಂತನೆಯಲ್ಲಿದ್ದವು. ಇಲ್ಲಿ ಎಲ್ಲಾ ಕಾರ್ಯಭಾರಗಳೂ ನಡೆದಿತ್ತು. ಆದರೆ ಇಲ್ಲಿ ಗೊಂದಲವಿಲ್ಲ, ಸದ್ದಿಲ್ಲ. ಎಲ್ಲಾ ಮೌನ ಸಾಮ್ರಾಜ್ಯ. ಮೌನದಲ್ಲಿ ರೂಪ, ಆಕಾರ, ಸಾಕಾರ, ಹೃದಯ ಭಾವ ಎಲ್ಲಾ ಝುಂಕರಿಸಿತ್ತು. ಎಲ್ಲವೂ ಮೂಕ ವಿಸ್ಮಯ ದಿಂದ ಕೂಡಿತ್ತು. ಬಿಸಿಲು ಬಿದ್ದರು, ಬೆಳದಿಂಗಳು ಹರಿದರು, ಮಳೆಗರಿದರು, ಗುಡುಗಿದರು, ಮಿಂಚಿದರು, ಗಾಳಿ ಬೀಸಿದರು, ಮೋಡ ಚುಂಬಿಸಿದರು, ಒಂದೇ ಮೌನದ ಮುದ್ರೆ, ಒಂದೇ ಮೌನ ಸಮ್ಮತ. ಒಂದೇ ಮೌನಶಾಂತಿ, ಒಂದೇ ಮೌನ ನಿಶ್ಚಲತೆ, ಒಂದೇ ಮೌನ ಧೃತಿ. ಒಂದೇ ಮೌನ ಶೃತಿ.

ಇದನ್ನು ನೋಡುತ್ತಾ ನೋಡುತ್ತಾ ನನ್ನ ಹೃದಯ ಶೃತಿಗೆ ಶೃತಿಕೊಟ್ಟಿತು. ಗುಡ್ಡಹಾಡ ಗುನುಗಿತು. ಬೆಟ್ಟ ಭಾವಬೆಳೆಸಿತು, ಕಲ್ಲು ಕರುಣೆ ಹರಿಸಿತು, ಗುಡ್ಡಬಂಡೆಗಳ ಹೃದಯ ವೇದ ನುಡಿಯಿತು. ಸತ್ಯಕ್ಕೆ ಕನ್ನಡಿ ಇಟ್ಟವು. ಸೌಂದರ್ಯಕ್ಕೆ ಸಾಕಾರವಾದವು.

ಮೂಕ ವಿಸ್ಮಯದಲ್ಲಿ ನಾ ಗುಡ್ಡ ಬೆಟ್ಟವಾದೆ. ನನ್ನ ಮುಂದೆ ನಿಂತ ಗುಡ್ಡಬೆಟ್ಟ ಮಾನವತ್ವದಿಂದ ದೈವತ್ವಕ್ಕೆ ಬೆಳೆದುನಿಂತವು.

## ಬಾಂಗ್ಲಾ ಹಿಂಸಾಚಾರ ಭಾರತ, ಜಗತ್ತಿಗೆ ಎಚ್ಚರಿಕೆಯ ಕರೆಗಂಟೆ



ಕಳೆದ ವರ್ಷದ ಜೆನ್ ಝೀ ದಂಗೆ, ಹಿಂದೂಗಳ ಮೇಲಿನ ಹಿಂಸಾಚಾರ, ರಾಜಕೀಯ ಸ್ಥಿತ್ಯಂಥರಕ್ಕೆ ಕಾರಣವಾಗಿದ್ದ ಬಾಂಗ್ಲಾದೇಶದಲ್ಲಿ ಮತ್ತೆ ಹಿಂಸೆ ಭುಗಿಲೆದ್ದಿದೆ. ಕಳೆದ ವರ್ಷದ ದಂಗೆಯ ಮುಂಚೂಣಿ ನಾಯಕ ಷರೀಫ್ ಒಸ್ಮಾನ್ ಹದಿ ಆಗುಂತಕರ ಗುಂಡೇಟಿಗೆ ಬಲಿಯಾಗಿದ್ದು ದೇಶದಲ್ಲಿ ಮತ್ತೆ ಹಿಂಸಾಚಾರಕ್ಕೆ ಕಿಚ್ಚು ಹಚ್ಚಿದೆ. ಅದರ ಭಾಗವಾಗಿ ಶುಕ್ರವಾರ ಸರ್ಕಾರಿ ಕಚೇರಿ, ಪತ್ರಿಕಾ ಕಚೇರಿಗಳ ಮೇಲೆ ದಾಳಿ ನಡೆಸಿ ಬೆಂಕಿ ಹಚ್ಚಲಾಗಿದೆ. ಮತ್ತೊಂದೆಡೆ ಭಾರತದಲ್ಲಿ ವಾಸಿಸುತ್ತಿರುವ ಮಾಜಿ ಪ್ರಧಾನಿ ಶೇಖ್ ಹಸೀನಾ ಗಡಿಪಾರು ವಿಷಯ ಮುಂದಿಟ್ಟು ಕೊಂಡು ಗುಂಪೊಂದು ಭಾರತೀಯ ರಾಯ ಭಾರ ಕಚೇರಿಗಳ ಮೇಲೆ ದಾಳಿ ಯತ್ನ ನಡೆಸಿವೆ. ಅದರ ಬೆನ್ನಲ್ಲೇ ಧರ್ಮ ನಿಂದನೆಯ ಹೆಸರಲ್ಲಿ ಹಿಂದೂ ವ್ಯಕ್ತಿಯನ್ನು ಹತ್ಯೆಗೈದು ಬಳಿಕ ಮರಕ್ಕೆ ನೇತುಹಾಕಿ ಸುಟ್ಟು ಹಾಕಿದ ಪೈಶಾಚಿಕ ಕೃತ್ಯವೂ ನಡೆದಿದೆ. ಇದೆಲ್ಲವೂ ಭಾರತ ಮತ್ತು ಜಾಗತಿಕ ಸಮುದಾಯಕ್ಕೆ ಎಚ್ಚರಿಕೆಯ ಕರೆಗಂಟೆ.

ಸಂಸದ ಶಶಿ ತರೂರ್ ನೇತೃತ್ವದ ಸಮಿತಿಯೊಂದು, ಬಾಂಗ್ಲಾದಲ್ಲಿನ ಪ್ರಸಕ್ತ ಪರಿ ಸ್ಥಿತಿಯು 1971ರ ಬಾಂಗ್ಲಾ ವಿಮೋಚನಾ ಹೋರಾಟದ ಬಳಿಕದ ಅತ್ಯಂತ ಗಂಭೀರ ಸಮಸ್ಯೆ. ಆಗಿನದ್ದು, ಸಮಸ್ಯೆಯಾಗಿದ್ದರೆ, ಈಗಿನದ್ದು ಪಾಕಿಸ್ತಾನ ಮತ್ತು ಚೀನಾ ಬೆಂಬಲಿತ ಮತೀಯವಾದಿಗಳ ಉದಯದ ಹೊಸ ವಿಪತ್ತು. ಇದನ್ನು ತಕ್ಷಣವೇ ನಿಗ್ರಹಿಸದೇ ಹೋದಲ್ಲಿ. ಭವಿಷ್ಯದಲ್ಲಿ ದೊಡ್ಡ ಸಮಸ್ಯೆ ಎದುರಿಸಬೇಕಾಗಿ ಬರಬಹುದು ಎಂದು ಎಚ್ಚರಿಕೆ ನೀಡಿದ ಬೆನ್ನಲ್ಲೇ ಬಾಂಗ್ಲಾದಲ್ಲಿ ಇಂಥಹ ಸರಣಿ ಘಟನೆಗಳು ನಡೆದಿವೆ. ಈ ಹಿಂದೆ ಅಮೇರಿಕಾ, ಪಾಕಿಸ್ತಾನದ ಮೂಲಕ ಭಾರತವನ್ನು ನಿಯಂತ್ರಿಸುವ ಕೆಲಸ ಮಾಡುತ್ತಿತ್ತು. ಆ ಕೆಲಸವನ್ನು ಇದೀಗ ಚೀನಾ ವಹಿಸಿ ಕೊಂಡಿದೆ. ಜೊತೆಗೆ ಈ ಕೆಲಸಕ್ಕೆ ಬಾಂಗ್ಲಾದೇಶ, ಮಾಲ್ಡೀವ್, ಶ್ರೀಲಂಕಾ ಮುಂತಾದ ದೇಶ ಗಳನ್ನು ದಾಳ ಮಾಡಿಕೊಳ್ಳುವ ಸತತ ಯತ್ನ ನಡೆಸುತ್ತಿದೆ. ಅದಕ್ಕೆ ಪ್ರತಿಯಾಗಿ ಭಾರತ ಮಾಲ್ಡೀವ್ಸ್ ಮತ್ತು ಶ್ರೀಲಂಕಾವನ್ನು ಮರಳಿ ತನ್ನ ಸ್ನೇಹದ ಅಪ್ಪುಗೆಗೆ ಕರೆತರುವಲ್ಲಿ ಯಶಸ್ವಿಯಾಗಿದೆ. ಆದರೆ ಮತೀಯವಾಗಿ ಭಾರತಕ್ಕೆ ಹೆಚ್ಚು ಅಪಾಯಕಾರಿಯಾಗಿರುವ ಬಾಂಗ್ಲಾ ದೇಶ ಇನ್ನೂ ಚೀನಾ ಮತ್ತು ಪಾಕ್ ತೆಕ್ಕೆಯಲ್ಲೇ ಇದೆ. ಬಾಂಗ್ಲಾದೇಶದಲ್ಲಿ ನೆರೆಹೊರೆಯ ದೇಶ ಗಳಲ್ಲಿ ಉಗ್ರವಾದಕ್ಕೆ ಪ್ರೋತ್ಸಾಹ ನೀಡುವ ಭವಿಷ್ಯದ ಯಾವುದೇ ಯೋಜನೆಗಳು ಭಾರತ ಮಾತ್ರವಲ್ಲದೆ ಜಾಗತಿಕ ಸಮುದಾಯಕ್ಕೆ ಅಪಾಯಕಾರಿ. ಹೀಗಾಗಿ ಈ ಸಮಸ್ಯೆಯನ್ನು ಚಿಗುರಿನಲ್ಲೇ ಚಿವುಟುವ ಕೆಲಸವನ್ನು ಭಾರತ ತ್ವರಿತವಾಗಿ ಮಾಡಬೇಕಾಗಿದೆ. ಮತ್ತೊಂದೆಡೆ ಹಂಗಾಮಿ ಸರ್ಕಾರದ ಅಧ್ಯಕ್ಷ ಮೊಹಮ್ಮದ್ ಯೂನಸ್ ಅವಧಿಯಲ್ಲಿ ಬಾಂಗ್ಲಾದಲ್ಲಿ ಅವರ ಅಣತಿಯಂತೆ ಏನೂ ನಡೆಯುತ್ತಿಲ್ಲ ಎಂದು ಪದೇ ಪದೇ ಸಾಬೀತಾಗುತ್ತಲೇ ಇದೆ. ಮಾಜಿ ಪ್ರಧಾನಿ ಪ್ರಧಾನಿ ಖಲೀದಾ ಜಿಯಾ ಅವರ ಅವಾಮಿ ಲೀಗ್, ಸೇನೆ ಮತ್ತು ಬಾಹ್ಯ ಶಕ್ತಿಗಳ ಒತ್ತಾಸೆಯಂತೆ ಸರ್ಕಾರ ನಡೆಯುತ್ತಿದೆ. ಹೀಗಾಗಿ ಹಿಂದೂಗಳ ಮೇಲಿನ ದೌರ್ಜನ್ಯ ಗಳಿಗೆ ಕೊನೆ ಬೀಳುತ್ತಿಲ್ಲ. ಇಂಥಹ ಘಟನೆಯನ್ನು ಭಾರತ ಕಟುವಾಗಿ ಖಂಡಿಸಬೇಕು.



## ಆಹಾರದಲ್ಲಿ ಕಲಬೆರಕೆ

ಬಾಯಿಮುಚ್ಚಿಕೊಂಡು ಕುಳಿತುಕೊಳ್ಳುವಿರೋ ಅಥವಾ ಅನಾರೋಗ್ಯಕ್ಕೆ ತುತ್ತಾಗಿ ನರಳು ವಿರೋ ಆಯ್ಕೆ ನಮ್ಮ ಮುಂದಿದೆ. ಮೊಟ್ಟೆಗಳಲ್ಲಿ ವಿಷ ಇದೆ, ಹಾಲಿನಲ್ಲಿ ಯೂರಿಯಾ ಬೆರೆತಿದೆ, ಸಕ್ಕರೆ ಅತ್ಯಂತ ಅಪಾಯಕಾರಿ, ಉಪ್ಪು ರಕ್ತದೊತ್ತಡ ಹೆಚ್ಚಿಸುತ್ತದೆ, ಮೈದಾ ಒಳ್ಳೆಯದಲ್ಲ, ಬೇಕರಿ ಪದಾರ್ಥಗಳು ಆರೋಗ್ಯಕ್ಕೆ ಹಾನಿಕಾರಕ. ಕಬಾಬ್, ಮಂಚೂರಿಗಳು ಅನಾರೋಗ್ಯಕಾರಿ, ತರಕಾರಿಗಳಲ್ಲಿ ಅತ್ಯಂತ ಅಪಾಯಕಾರಿ ರಾಸಾಯನಿಕ ಅಂಶ ಗಳು ಸೇರಿವೆ, ಮಾಂಸಹಾರಿ ಪದಾ ರ್ಥಗಳಲ್ಲಿ ಅತಿಯಾದ ಹಾನಿಕಾರಕ ಔಷಧಗಳನ್ನು ಬಳಸಲಾಗುತ್ತದೆ. ಹೆಚ್ಚು ರೋಟಿ, ಚಪಾತಿ ಗಳು ತಿನ್ನುವುದರಿಂದ ಅನಾಹುತವಾಗ ಬಹುದು, ಅನೇಕ ಹಣ್ಣುಗಳಲ್ಲಿ ಕ್ಯಾನ್ಸರ್ ಕಾರಕ ಅಂಶ ಗಳು ಪತ್ತೆಯಾಗಿವೆ. ನಗರ ಪ್ರದೇಶಗಳ ಗಾಳಿಯಲ್ಲಿ ವಿಷಕಾರಕ ಧೂಳಿನ ಕಣಗಳಿವೆ, ನೀರಿನಲ್ಲಿ ದೀರ್ಘಕಾಲದ ಅನೇಕ ರೋಗಗಳಿಗೆ ಕಾರಣವಾಗುವ ಬ್ಯಾಕ್ಟೀರಿಯಾ ಗಳಿವೆ. ನಾವು ಅಡುಗೆಗೆ ಬಳಸುವ ಪಾತ್ರೆಗಳಲ್ಲಿ ಹಾನಿಕಾರಕ ಕಣಗಳು ಪತ್ತೆಯಾಗಿವೆ. ಪ್ಲಾಸ್ಟಿಕ್ ಉಪಯೋಗಿಸುವು ದರಿಂದ ಕ್ಯಾನ್ಸರ್‌ಕಾರಕ ಅಂಶಗಳು ದೇಹ ಸೇರುತ್ತವೆ, ಎಣ್ಣೆಗಳಲ್ಲಿ ಅತ್ಯಂತ ಅಪಾಯಕಾರಿ ಪೆಟ್ರೋಲಿಯಂ ಅಂಶಗಳನ್ನು ಸೇರಿಸಲಾಗುತ್ತದೆ. ಸೊಪ್ಪುಗಳಲ್ಲಿಯೂ ಅತಿ ಹೆಚ್ಚು ರಾಸಾಯನಿಕ ಪದಾರ್ಥಗಳ ಬಳಕೆಯಾಗುತ್ತಿದೆ.

ಹೀಗೆ ಹೇಳುತ್ತಾ ಹೋದರೆ ನಾವು ನೆಮ್ಮದಿಯಾಗಿ ಯಾವ ಆಹಾರ ಸೇವಿಸುವುದು, ಯಾವ ನೀರು ಕುಡಿಯುವುದು, ಯಾವ ಗಾಳಿ ಉಸಿರಾಡುವುದು, ಯಾವ ವಾತಾವರಣದಲ್ಲಿ ಬದುಕು ವುದು. ಹೀಗೆ ಭಯ ಮತ್ತು ಆತಂಕ ಒಟ್ಟಿಗೆ ಆಗುತ್ತದೆ. ಪ್ರತಿನಿತ್ಯ ಮಾಧ್ಯಮ ಸಾಮಾಜಿಕ ಜಾಲತಾಣ ಮತ್ತು ನಮ್ಮ ಸುತ್ತಮುತ್ತಲ ಜನರ ಆರೋಗ್ಯದ ವಿಷಯಗಳನ್ನು ಕೇಳುತ್ತಿದ್ದರೆ ಭಯವಾಗುತ್ತದೆ.

ಸಹಜವಾಗಿ ಪ್ರಕೃತಿಗೆ ನಿಷ್ಠರಾಗಿ ಬದುಕಬೇಕಾಗಿದ್ದ ನಾವು ಅಸಹಜ ಜೀವನಶೈಲಿ, ಜೀವನ ಪದ್ಧತಿ, ಆಹಾರ ಕ್ರಮ ಅಳವಡಿಸಿಕೊಂಡು ಈಗ ನಮ್ಮ ನೆರಳಿಗೆ ನಾವೇ ಬೆಚ್ಚುವಂತಾಗಿದೆ. ಕೆಲವೇ ವರ್ಷಗಳ ಹಿಂದೆ ಬಹುತೇಕ ಕೆಲ ಮಧ್ಯಮ ಮತ್ತು ಬಡವರ್ಗದವರು ಎರಡು ಹೊತ್ತಿನ ಹೊಟ್ಟೆ ತುಂಬ ಊಟಕ್ಕಾಗಿ ಪರದಾಡುವ ಪರಿಸ್ಥಿತಿ ಇತ್ತು. ಇದೀಗ ತೀರ ಅತ್ಯಂತ ಕಡು ಬಡವರನ್ನು ಹೊರತುಪಡಿಸಿ ಇತರರಿಗೆ ಸಾಕಷ್ಟು ಊಟದ ಆಯ್ಕೆಗಳಿವೆ. ಆದರೆ ಆಯ್ಕೆಗಳ ಲ್ಲಿಯೇ ವಿಷ ಇದೆ, ರಾಸಾಯನಿಕ ಇದೆ, ಕ್ಯಾನ್ಸರ್ ಕಾರಕ ಅಂಶಗಳಿದ್ದಾವೆ ಮುಂತಾದ ಭಯ ಹುಟ್ಟಿಸುವ ಅಥವಾ ವಾಸ್ತವದಲ್ಲಿ ಹಾಗೆ ಇರುವ ಪರಿಸ್ಥಿತಿ ನಿರ್ಮಾಣವಾಗಿದೆ.

ಒಂದು ಕಡೆ ಮಾನವೀಯ ಮೌಲ್ಯಗಳ ಕುಸಿತ, ಇನ್ನೊಂದು ಕಡೆ ದೇಹಕ್ಕೆ ಬೇಕಾದ ಮೂಲ ಭೂತ ಅವಶ್ಯಕತೆಗಳಾದ ಗಾಳಿ, ನೀರು ಆಹಾರ ಮಲಿನವಾಗಿದೆ. ಇಂತಹ ಭಯಾನಕ ಪರಿಸ್ಥಿತಿ ಯಲ್ಲಿ ನಾವು ಮಾತ್ರ ತುಂಬಾ ಒಳ್ಳೆಯ ಆಧುನಿಕ ವ್ಯವಸ್ಥೆಯ ಶಿಕ್ಷಣ, ಆರೋಗ್ಯ, ಮೊಬೈಲ್, ಇಂಟರ್ ನೆಟ್, ವಾಹನಗಳು, ಬಟ್ಟೆ, ಶೂ ಚಪ್ಪಲಿ, ಹೋಟೆಲ್, ಪ್ರವಾಸಿ ತಾಣಗಳು, ವಿದೇಶಿ ಯಾತ್ರೆಗಳು, ಮಾಲು ಬಾರುಗಳು..

ಏನೋ ಮನುಷ್ಯ ಸುಖಲೋಲುಪತೆಯ ಉತ್ತುಂಗದಲ್ಲಿ ಇದ್ದಂತೆ ಭಾಸವಾಗುತ್ತಿದೆ. ಆದರೆ ಈ ಎರಡು ವಿರುದ್ಧ ವಿಷಯಗಳ ನಡುವೆ ನಿಜಕ್ಕೂ ಸಮನ್ವಯ ಸಾಧಿಸಬೇಕಾದ ಹಂತದಲ್ಲಿ ನಾವಿದ್ದೇವೆ. ಈ ಮೂಲ ವಿಷಯವನ್ನು ನಮ್ಮ ಆಡಳಿತ ಮಾಡುತ್ತಿರುವ ರಾಜಕೀಯ ಪಕ್ಷಗಳು ತಲೆಕೆಡಿಸಿಕೊಳ್ಳದೆ ತಮ್ಮದೇ ರೀತಿಯ ಅಭಿವೃದ್ಧಿ ರಾಜಕೀಯ ಮಾಡುತ್ತಾ, ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿವೆ. ಜನರು ಸಹ ಹಿತಾನುಭವದಲ್ಲಿ ಭ್ರಮೆಗೆ ಒಳಗಾಗಿ ಸಾಧ್ಯವಾದಷ್ಟು ತಮ್ಮ ವೈಯಕ್ತಿಕ ಸುಖ ದುಃಖಗಳಲ್ಲಿಯೇ ಕಳೆದು ಹೋಗಿ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸದೆ ಪಲಾಯನ ಮಾಡುತ್ತಿದ್ದಾರೆ ಅಥವಾ ನಿರ್ಲಕ್ಷಿಸುತ್ತಿದ್ದಾರೆ.

ಅದರ ದುಷ್ಪರಿಣಾಮವನ್ನು ಇಡೀ ಸಾಮಾಜಿಕ ವ್ಯವಸ್ಥೆ ಅನುಭವಿಸುತ್ತಿದೆ. ಮಾಧ್ಯಮಗಳಲ್ಲಿ ಪ್ರಸಾರವಾಗುವ ಈ ವಿಷಪೂರಿತ, ಕಲಬೆರಕೆ ಆಹಾರ ವಸ್ತುಗಳ ಬಗ್ಗೆ ಯಾರೂ ಹೆಚ್ಚಿಗೆ ತಲೆಕೆಡಿಸಿ ಕೊಳ್ಳುತ್ತಿಲ್ಲ. ತಮಗೆ ಅನಾರೋಗ್ಯವಾಗಿ ಆಸ್ಪತ್ರೆಗೆ ದಾಖಲಾದಾಗ ತಾವು ಅನುಭವಿಸುವ ಎಲ್ಲಾ ರೀತಿಯ ನೋವುಗಳನ್ನು ಕಂಡು ಆಗ ಪಶ್ಚಾತ್ತಾಪ ಪಡುತ್ತಾರೆ. ಈ ಕ್ಷಣದಲ್ಲಿ ಸರ್ಕಾರದ ಮೇಲೆ ಸಾಮೂಹಿಕ ಒತ್ತಡ ತಂದು, ಜನಸಂಖ್ಯೆ ಹೆಚ್ಚಳದಿಂದ ಜನರ ಬೇಡಿಕೆಗಳು ಎಷ್ಟೇ ಜಾಸ್ತಿಯಾಗಿದ್ದರು ಆಹಾರ ಕಲಬೆರಕೆ, ಪರಿಸರ ಮಾಲಿನ್ಯವನ್ನು ತಡೆಗಟ್ಟಿ ಒಂದು ರೀತಿಯ ಮಾನವ ಆರೋಗ್ಯ ಕೇಂದ್ರಿತ ಅಭಿವೃದ್ಧಿಯ ಸಮತೋಲನವನ್ನು ಸಾಧಿಸಲು ಈಗಲೂ ಸಾಧ್ಯವಿದೆ.

ಸರ್ಕಾರವೆಂಬ ಆಡಳಿತ ವ್ಯವಸ್ಥೆಗೆ ಕನಿಷ್ಠ ಪ್ರಮಾಣದ ಪ್ರಾಮಾಣಿಕತೆ, ದಕ್ಷತೆ, ಜನರ ಬಗ್ಗೆ ಕಳಕಳಿ ಇದ್ದರೆ ಇದೊಂದು ದೊಡ್ಡ ವಿಷಯವೇ ಅಲ್ಲ. ಇಡೀ ವ್ಯವಸ್ಥೆ ಮನಸ್ಸಿನಲ್ಲಿಯೇ ಗೊಣಗುತ್ತಾ, ಪರಿಹಾರ ಎಂಬುದು ಮುಖ್ಯವಾಗದೆ ಹಾಗೆ ಕೇವಲ ದಿನಗಳನ್ನು ತಳ್ಳುತ್ತಾ ಮುಂದೆ ಸಾಗುತ್ತಿದೆ. ಆಸ್ಪತ್ರೆಗಳು, ಪೊಲೀಸ್ ಸ್ಟೇಷನ್, ನ್ಯಾಯಾಲಯಗಳು, ಮೆಡಿಕಲ್ ಲ್ಯಾಬೋರೇಟರಿಗಳು, ಸಿನಿಮಾ ಮಂದಿರಗಳು, ಪ್ರವಾಸಿ ಸ್ಥಳಗಳು, ಬಸ್ಸು ರೈಲು ವಿಮಾನ ನಿಲ್ದಾಣಗಳು ತುಂಬಿ ತುಳುಕಿ ಕಾಲ್ತುಳಿತಕ್ಕೆ ಸಿಲುಕಿ ಜನರು ಸಾಯುವ ಮುನ್ನ ನಾಗರಿಕತೆ ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದು.

ಇಲ್ಲದಿದ್ದರೆ ಅರಾಜಕತೆಯ ಸಮಾಜದಲ್ಲಿ ಇದನ್ನೇ ಮಹಾಪ್ರಸಾದವೆಂದು ಒಪ್ಪಿಕೊಂಡು, ಬಂದದ್ದೆಲ್ಲಾ ಬರಲಿ ಎಂದು ಅನುಭವಿಸುತ್ತಾ, ಗುಲಾಮರಂತೆ ಬದುಕೋಣ ಎಂಬ ಮನಸ್ಥಿತಿ ಇಡೀ ಸಮಾಜ ವ್ಯಾಪಿಸುವ ಮುನ್ನ ಎಚ್ಚೆತ್ತುಕೊಳ್ಳಬೇಕು. ಇಲ್ಲದಿದ್ದರೆ ಎಂದೋ ಬರುವ ಅನಾ ಹುತ ಕೆಲವೇ ದಿನಗಳಲ್ಲಿ ಘಟಿಸಿದರು ಆಶ್ಚರ್ಯವಿಲ್ಲ. ಮತ್ತೊಮ್ಮೆ ದಯವಿಟ್ಟು ಯೋಚಿಸಿ ಎಲ್ಲರೂ ಒಟ್ಟಾಗಿ ಕಾರ್ಯೋನ್ಮುಖರಾಗೋಣ.

# ಪಾಕ್‌ಗೆ ವಿಶ್ವಕಪ್ ಚಾಂಪಿಯನ್ ಪಟ್ಟ

## ಸಮೀರ್ ಮಿನ್ಹಾಸ್ ಶತಕ | ಭಾರತಕ್ಕೆ 191 ರನ್ ಅಂತರದ ಹೀನಾಯ ಸೋಲು

• ಪ್ರಜೋದಯ ವರದಿ

**ದುಬೈ:** 19 ವರ್ಷದೊಳಗಿನವರ ಏಕದಿನ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಭಾರತದ ಎದುರು 191 ರನ್ ಅಂತರದ ಜಯ ಸಾಧಿಸಿರುವ ಪಾಕಿಸ್ತಾನ ತಂಡ ಚಾಂಪಿಯನ್ ಪಟ್ಟಕ್ಕೇರಿದೆ.

ದುಬೈನ ಐಸಿಸಿ ಅಕಾಡೆಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಾಕ್ ಪಡೆ, ಆರಂಭಿಕ ಬ್ಯಾಟರ್ ಸಮೀರ್ ಮಿನ್ಹಾಸ್ ಬಾರಿಸಿದ ಅಮೋಘ ಶತಕದ ಬಲದಿಂದ ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 347 ರನ್ ಕಲೆಹಾಕಿತ್ತು.

ಬೃಹತ್ ಗುರಿ ಬೆನ್ನತ್ತಿದ ಭಾರತ, ಅಲ್ಪಮೊತ್ತಕ್ಕೆ ಸರ್ವಪತನ ಕಂಡಿತು. ಟೀಂ ಇಂಡಿಯಾ ಪರ ಯಾರೊಬ್ಬರೂ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಲಿಲ್ಲ. ಮೊದಲ ಎಸೆತದಲ್ಲೇ ಸಿಕ್ಸರ್ ಸಿಡಿಸಿದ ವೈಭವ್ ಸೂರ್ಯವಂಶಿ (26) ಹತ್ತು ಎಸೆತ ಎದುರಿಸಿ ಪೆವಿಲಿಯನ್ ಸೇರಿಕೊಂಡರು. ಆಯುಷ್ ಮ್ಹಾತ್ರೆ (2) ಮತ್ತೊಮ್ಮೆ ವೈಫಲ್ಯ ಅನುಭವಿಸಿದೆ.

ಕಳೆದ ಪಂದ್ಯದಲ್ಲಿ ಮಿಂಚಿದ್ದ ಆ್ಯರನ್ ಜಾರ್ಜ್ (16) ಹಾಗೂ ವಿಹಾನ್ ಮಲ್ಹೋತ್ರಾ (7) ಆಟ ಪಾಕ್ ಎದುರು ನಡೆಯಲಿಲ್ಲ. ವೇದಾಂತ್ ತ್ರಿವೇದಿ (9), ಕನಿಷ್ಕ್ ಚೌಹಾನ್ (13), ಹೆನಿಲ್ ಪಟೇಲ್ (6) ಬಂದಷ್ಟೇ ವೇಗವಾಗಿ ಪೆವಿಲಿಯನ್ ಸೇರಿಕೊಂಡರು.




ಕೆಳ ಕ್ರಮಾಂಕದ ಖಿಲಾನ್ ಪಟೇಲ್ (19) ಮತ್ತು ದೀಪೇಂದ್ರ ದೇವೇಂದ್ರನ್ (36) ಹೋರಾಡಲು ಪ್ರಯತ್ನಿಸಿದರಾದರೂ, ಅಷ್ಟರಲ್ಲಿ ಪಂದ್ಯ ಕೈ ಬಿಟ್ಟುಹೋಗಿತ್ತು ಅಂತಿಮವಾಗಿ 26.2 ಓವರ್‌ಗಳಲ್ಲಿ 156 ರನ್ ಗಳಿಸುವಷ್ಟರಲ್ಲಿ ಎಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು ಸೋಲಿಗೆ ಶರಣಾಯಿತು.


ಪಾಕ್ ಪರ ಅಲಿ ರಾಜಾ 4, ಮೊಹಮ್ಮದ್ ಸಯ್ಯಾಮ್, ಅಬ್ದುಲ್ ಸುಭಾನ್, ಹುಝೈಫಾ ಅಹ್ಸಾನ್ ತಲಾ 2 ವಿಕೆಟ್ ಹಂಚಿಕೊಂಡರು.

**ಮಿನ್ಹಾಸ್ ಅಬ್ಬರ**

ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡ ಮ್ಹಾತ್ರೆ ಯೋಜನೆ ಕೈಗೂಡಲಿಲ್ಲ. ಟೀಂ ಇಂಡಿಯಾದ ಎಲ್ಲಾ ಲೆಕ್ಕಾಚಾರಗಳನ್ನು ಪಾಕ್ ಆರಂಭಿಕ ಸಮೀರ್ ಮಿನ್ಹಾಸ್ ತಲೆಕೆಳಗಾಗಿಸಿದರು. 113 ಎಸೆತಗಳನ್ನು ಎದುರಿಸಿದ ಮಿನ್ಹಾಸ್, 9 ಸಿಕ್ಸರ್ ಮತ್ತು 17 ಬೌಂಡರಿ ಸಹಿತ 172 ರನ್ ಬಾರಿಸಿದರು. ಅವರನ್ನು ಬಿಟ್ಟರೆ, ಉಸ್ಮಾನ್ ಖಾನ್ (35), ಅಹ್ಮದ್ ಹುಸೈನ್ (56) ಮಾತ್ರವೇ ಅಲ್ಪ ಕಾಣಿಕೆ ನೀಡಿದರು. ಉಳಿದವರಿಂದ ಸಾಮರ್ಥ್ಯಕ್ಕೆ ತಕ್ಕ ಪ್ರದರ್ಶನ ಬರಲಿಲ್ಲ.

ಮಿನ್ಹಾಸ್, 42.5 ಓವರ್‌ನಲ್ಲಿ ಔಟಾಗುವ ಮುನ್ನ ಪಾಕ್ 302 ರನ್ ಗಳಿಸಿತ್ತು. ಹೀಗಾಗಿ, 360 ಕ್ಕಿಂತ ಅಧಿಕ ರನ್ ಪೇರಿಸುವ ಸಾಧ್ಯತೆ ಇತ್ತು. ಆದರೆ, ಭಾರತದ ಬೌಲರ್‌ಗಳು ಕೊನೆಯಲ್ಲಿ ಲಯ ಕಂಡುಕೊಂಡರು. ಅಂತಿಮ 44 ಎಸೆತಗಳಲ್ಲಿ 5 ವಿಕೆಟ್‌ಗಳನ್ನು ಪಡೆದು 47 ರನ್ ಮಾತ್ರ ಬಿಟ್ಟುಕೊಟ್ಟು, ಎದುರಾಳಿಯನ್ನು 350ರ ಗಡಿ ದಾಟದಂತೆ ನೋಡಿಕೊಂಡರು.

ಫೈನಲ್‌ನಲ್ಲಿ ಅಮೋಘ ಶತಕ ಸಿಡಿಸಿ ಪಾಕ್ ಪಡೆಯನ್ನು ಚಾಂಪಿಯನ್‌ಪಟ್ಟಕ್ಕೇರಿಸಿದ ಮಿನ್ಹಾಸ್ ಅರ್ಹವಾಗಿಯೇ ಪಂದ್ಯಶ್ರೇಷ್ಠ ಎನಿಸಿದರು. ಅದರೊಟ್ಟಿಗೆ, ಟೂರ್ನಿಯುದ್ದಕ್ಕೂ ಮಿಂಚಿರುವ ಅವರಿಗೆ ಸರಣಿ ಶ್ರೇಷ್ಠ ಗೌರವವೂ ಒಲಿಯಿತು. ಟೂರ್ನಿಯಲ್ಲಿ ಆಡಿದ 5 ಪಂದ್ಯಗಳಲ್ಲಿ 157ರ ಸರಾಸರಿಯಲ್ಲಿ 471 ರನ್ ಕಲೆಹಾಕಿದ್ದಾರೆ. 2 ಶತಕ ಹಾಗೂ 1 ಅರ್ಧಶತಕ ಅವರ ಬ್ಯಾಟ್‌ನಿಂದ ಬಂದಿವೆ.




## ಪೋಷಕರು ಮಕ್ಕಳ ಚಟುವಟಿಕೆ ಗಮನಿಸುವುದು ಅಗತ್ಯ

• ಪ್ರಜೋದಯ ವರದಿ

**ಕೊಣನೂರು:** ಮಕ್ಕಳಿಗೆ ಕೇಳುವುದಕ್ಕಿಂತ ಮೊದಲೇ ವಿವಿಧ ವಸ್ತುಗಳನ್ನು ಕೊಡಿಸುವ ಪೋಷಕರು ಅವರಲ್ಲಿ ಜವಾಬ್ದಾರಿ ಮತ್ತು ವಸ್ತುಗಳ ಬೆಲೆ ಅರಿಯಲು ಅವಕಾಶ ಮಾಡಿಕೊಡುವಲ್ಲಿ ವಿಫಲರಾಗುತ್ತಿದ್ದಾರೆಂದು ಜಿಲ್ಲಾ ಮಹಿಳಾ ಬರಹಗಾರರ ಸಂಘದ ಅಧ್ಯಕ್ಷೆ ಹೆಚ್.ಎಲ್. ರಾಜೇಶ್ವರಿ ಅವರು ತಿಳಿಸಿದರು.

ಪಟ್ಟಣದ ಎಂಕೆಎಸ್ ಲಯನ್ಸ್ ವಿದ್ಯಾನಿಕೇತನ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಕೋವಿಡ್ ಸಮಯದಲ್ಲಿ ಶಾಲಾ ವಿದ್ಯಾರ್ಥಿಗಳ ಕೈಸೇರಿದ ಮೊಬೈಲ್ ಫೋನ್ ಈಗ ಮಕ್ಕಳಿಗೆ ಅನಗತ್ಯ ವಿಷಯಗಳನ್ನು ಕಲಿಸುತ್ತಿರುವುದು ಅಘಾತಕಾರಿ ವಿಷಯ. ಪೋಷಕರು ಮಕ್ಕಳ ಚಟುವಟಿಕೆಯನ್ನು ಗಮನಿಸುವುದು ಅತ್ಯಗತ್ಯ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ. ನಾಗರಾಜು ಅವರು ಮಾತನಾಡಿ, ಗ್ರಾಮೀಣ ಭಾಗದಲ್ಲಿ ಅತ್ಯಂತ ಕಡಿಮೆ ಶುಲ್ಕದಲ್ಲಿ ಇಂಗ್ಲೀಷ್ ಶಿಕ್ಷಣ ನೀಡುತ್ತಿರುವ ಲಯನ್ಸ್ ಶಾಲೆ ಅನೇಕರಿಗೆ ವೈದ್ಯರು ಮತ್ತು ಇಂಜಿನೀಯರ್ ಪ್ರತಿಷ್ಠಿತ ವೃತ್ತಿ ಗಳಿಸಲು ಅವಕಾಶ ಮಾಡಿದೆ ಎಂದರು.

ಲಯನ್ಸ್ ಕ್ಲಬ್ ಅಧ್ಯಕ್ಷ ಕೆ.ಎ. ಶ್ರೀಧರ್, ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಅಬೂಬಕರ್, ಕಾರ್ಯದರ್ಶಿ ರವಿಕುಮಾರ್, ಖಜಾಂಚಿ ಸುಬ್ರಹ್ಮಣ್ಯ,



ಪಂಚಾಯಿತಿ ಉಪಾಧ್ಯಕ್ಷೆ ಪಾವನಾ ಸತೀಶ್ ಮಾತನಾಡಿ, ಮಕ್ಕಳಿಗೆ ಸಂಸ್ಕಾರ ಮತ್ತು ಮೌಲ್ಯಗಳನ್ನು ತಿಳಿಸಬೇಕೆಂದು ಪೋಷಕರಲ್ಲಿ ಮನವಿ ಮಾಡಿದರು.

ಕ್ರೀಡಾ, ಸಾಹಿತ್ಯಕ ಮತ್ತು ಪಠ್ಯ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಸಾಧಕ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಯಿತು. ವಿದ್ಯಾರ್ಥಿಗಳು ನೃತ್ಯ, ಐತಿಹಾಸಿಕ, ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಿದರು. ಲಿಯೋ ಕ್ಲಬ್ ಅಧ್ಯಕ್ಷೆ ಲಹರಿ, ಶಾಲಾ ಆಡಳಿತ ಮಂಡಳಿ, ಲಯನ್ಸ್ ಕ್ಲಬ್ ಪದಾಧಿಕಾರಿಗಳು, ಶಿಕ್ಷಕಿಯರು, ಪೋಷಕರು ಭಾಗವಹಿಸಿದ್ದರು.

## ಡಿ.26ರಿಂದ ರೈಲು ಪ್ರಯಾಣ ದರ ಏರಿಕೆ

• ಪ್ರಜೋದಯ ವರದಿ

**ನವದೆಹಲಿ:** ಇದೇ ಡಿಸೆಂಬರ್ 26 ರಿಂದ ಜಾರಿಗೆ ಬರುವಂತೆ ಭಾರತೀಯ ರೈಲ್ವೆ ಸಚಿವಾಲಯವು ಪ್ರಯಾಣ ದರ ಏರಿಕೆ ಘೋಷಿಸಿದ್ದು, ಈ ನಿರ್ಧಾರದಿಂದ ದೂರದ ಊರುಗಳಿಗೆ ಪ್ರಯಾಣಿಸುವವರಿಗೆತುಸು ಹೊರೆಯಾಗಲಿದೆ.

ಮೇಲ್ ಹಾಗೂ ಎಕ್ಸ್‌ಪ್ರೆಸ್ ರೈಲುಗಳ ಎಸಿ ಹಾಗೂ ನಾನ್ ಎಸಿ ಪ್ರಯಾಣ ದರವನ್ನು ಪ್ರತಿ ಕಿ.ಮೀಗೆ 2 ಪೈಸೆ ಏರಿಕೆ ಮಾಡಿ ರೈಲ್ವೆ ಸಚಿವಾಲಯ ಆದೇಶ ಹೊರಡಿಸಿದೆ.

ಉಪನಗರ ರೈಲುಗಳಲ್ಲಿನ ಮಾಸಿಕ ಸೀಸನ್ ಟಿಕೆಟ್ ಹಾಗೂ ಇತರೆ ರೈಲುಗಳಲ್ಲಿ 215 ಕಿ.ಮೀ ವರೆಗಿನ ಸಾಮಾನ್ಯ ದರ್ಜೆಯ ಪ್ರಯಾಣ ದರದಲ್ಲಿ ಯಾವುದೇ ಏರಿಕೆ ಇಲ್ಲ ಎಂದು ರೈಲ್ವೆ ಅಧಿಕಾರಿ ತಿಳಿಸಿದ್ದಾರೆ. 215 ಕಿ.ಮೀ ಮೇಲ್ಪಟ್ಟ ರೈಲಿನ ಸಾಮಾನ್ಯ ದರ್ಜೆಯ ಪ್ರಯಾಣ ದರದಲ್ಲಿ ಪ್ರತಿ ಕಿ.ಮೀಗೆ 1 ಪೈಸೆ ಏರಿಕೆ ಮಾಡಲಾಗಿದೆ. ಪ್ರಯಾಣ ದರ ಏರಿಕೆಯಿಂದ 2026ರ ಮಾರ್ಚ್ ವೇಳೆಗೆ ರೈಲ್ವೆ ಇಲಾಖೆಗೆ ಹೆಚ್ಚುವರಿಯಾಗಿ 600 ಕೋಟಿ ಆದಾಯ ಬರಲಿದೆ ಎಂದು ಹೇಳಿದ್ದಾರೆ.

## ಆರೋಗ್ಯವಂತ ಸಮಾಜದಿಂದ ಸದೃಢ ಭಾರತ ನಿರ್ಮಾಣ

• ಪ್ರಜೋದಯ ವರದಿ

**ಅರಸೀಕೆರೆ:** ಈಗಾಗಲೇ ಪೋಲಿಯೋ ಮುಕ್ತ ರಾಷ್ಟ್ರ ಭಾರತವಾಗಿದ್ದರು ತಮ್ಮ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸುವುದರಲ್ಲಿ ತಾತ್ಸಾರ ಮನೋಭಾವ ಬೇಡ ಎಂದು ತಹಶೀಲ್ದಾರ್ ಸಂತೋಷ್‌ಕುಮಾರ್ ಪೋಷಕರಿಗೆ ಕಿವಿ ಮಾತು ಹೇಳಿದರು.

ನಗರದ ಸರ್ಕಾರಿ ಜಯಚಾಮರಾಜೇಂದ್ರ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪುಟಾಣಿ ಚೈತನ್ಯಾಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆರೋಗ್ಯವಂತ ಸಮಾಜದಿಂದ ಮಾತ್ರ ಸದೃಢ ಭಾರತ ನಿರ್ಮಾಣ ಸಾಧ್ಯ. ಈ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪೋಲಿಯೋ ಲಸಿಕೆ ಅಭಿಯಾನ ಸೇರಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದು, ಸರ್ಕಾರ ಗಳ ಜೊತೆ ಪ್ರಗತಿಪರ ಸಂಘಟನೆಗಳು ಕೈಜೋಡಿಸುತ್ತಿರುವುದು ಸಂತಸದ ವಿಷಯವೆಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು.

ತಾಲ್ಲೂಕು ವೈದ್ಯಾಧಿಕಾರಿ ಡಾ||ರಂಗನಾಥ್ ಅವರು ಮಾತನಾಡಿ, ನಗರ ಸೇರಿ ತಾಲ್ಲೂಕಿನಲ್ಲಿ ಐದು ವರ್ಷ



ಒಳಪಟ್ಟ 17,600 ಮಕ್ಕಳಿದ್ದು, ಪ್ರತಿಯೊಂದು ಮಗುವಿಗೂ ಕಡ್ಡಾಯವಾಗಿ ಪೋಲಿಯೋ ಲಸಿಕೆ ಹಾಕಲು ತಾಲ್ಲೂಕು ಆಡಳಿತ ರೋಟರಿ ಸಂಸ್ಥೆ ಜೊತೆಗೂಡಿ ಆರೋಗ್ಯ ಇಲಾಖೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಸಾರಿಗೆ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಒಳಗೊಂಡಂತೆ 150 ಕೇಂದ್ರಗಳಲ್ಲಿ ಮಕ್ಕಳಿಗೆ ಲಸಿಕೆ ಹಾಕಲು ಸಿದ್ಧತೆ ಮಾಡಿಕೊಂಡಿದ್ದು, 650ಕ್ಕೂ ಹೆಚ್ಚು ಸಿಬ್ಬಂದಿಗಳು ಈ ಅಭಿಯಾನದಲ್ಲಿ ಪಾಲ್ಗೊಂಡಿದ್ದಾರೆಂದು ಮಾಹಿತಿ ನೀಡಿದರು.

ರೋಟರಿ ಸಂಸ್ಥೆಯ ಸಹಾಯಕ ಗೌರ್ನರ್ ಬಿ.ಕೆ.ಯೋಗೀಶ್ ಚಾರ್ ಅವರು ಮಾತನಾಡಿ, ಆರೋಗ್ಯ, ಪರಿಸರ, ಶಿಕ್ಷಣ ಸೇರಿ ಹಲವು ಕ್ಷೇತ್ರಗಳಲ್ಲಿ ರೋಟರಿ ಸಂಸ್ಥೆ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸೇವೆ ಸಲ್ಲಿಸುತ್ತಿದ್ದು, ಅದೇ ರೀತಿ ಭಾರತ ದೇಶದಲ್ಲಿ ಪೋಲಿಯೋ ಅಭಿಯಾನಕ್ಕೆ ಕೈಜೋಡಿಸುವ ಮೂಲಕ ಸಮಾಜಮುಖಿ ಸೇವೆಯಲ್ಲಿ ರೋಟರಿ ಸಂಸ್ಥೆ ದೊಡ್ಡ ಕಾಣಿಕೆ ನೀಡುತ್ತಾ ಬಂದಿದೆ ಎಂದರು.

ಜೆ.ಸಿ.ಆಸ್ಪತ್ರೆಯ ರಕ್ಷಾ ಸಮಿತಿ ಸದಸ್ಯರಾದ ಹೇಮಂತ್ ಕುಮಾರ್, ಎಂ.ವೈ.ಖಾನ್, ವಿಭವ್, ಮಂಜುನಾಥ್, ರೇವಣ್ಣ, ಶಿವಕುಮಾರ್, ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ರಂಜಿತಾ ವಿನಯ್, ಕಾರ್ಯದರ್ಶಿ ರೇಷ್ಮಾರೈ, ಎಡಿಟರ್ ಶ್ವೇತಾ ಅನಿಲ್, ಶ್ವೇತಾ ಮೋಹನ್, ಹೇಮಾ ನಾಗರಾಜ್, ಕಿನ್ನರ್ ವೀಲ್ ಕ್ಲಬ್ ಸದಸ್ಯರು, ಸಂಧ್ಯಾ ವಿಶ್ವನಾಥ್, ಸರಸ ಮಲ್ಲೇಶ್, ಓಂಕಾರಮ್ಮ, ಜಮುನಾ, ಆರತಿ ಇದ್ದರು.

## ಜನರೊಂದಿಗೆ ಬೆರೆತರೆ ನೈಜ ಸಮಸ್ಯೆ ಗುರುತಿಸಬಹುದು

• ಪ್ರಜೋದಯ ವರದಿ

**ಹಾಸನ:** ಜನರೊಂದಿಗೆ ಬೆರೆತಾಗ ಮಾತ್ರ ಸಮಾಜದ ನೈಜ ಸಮಸ್ಯೆಗಳನ್ನು ಗುರುತಿಸಲು ಸಾಧ್ಯ ಎಂದು ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲ ಡಾ.ಸಿ.ವಿ. ವೆಂಕಟೇಶ್ ಅವರು ಅಭಿಪ್ರಾಯಪಟ್ಟರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಮೆಕ್ಯಾನಿಕಲ್ ಇಂಜಿನೀಯರಿಂಗ್ ವಿಭಾಗದ ವತಿಯಿಂದ 3ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಓರಿಯಂಟೇಷನ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನೈಜ ಸಮಸ್ಯೆಗಳನ್ನು ಪರಿಹರಿಸಲು ಇಂಜಿನೀ ಯರಿಂಗ್ ಜ್ಞಾನವನ್ನು ಅನ್ವಯಿಸಿ. ಎಲ್ಲರ ಜೊತೆ ಬೆರೆಯುವ ಗುಣ ಬೆಳೆಸಿಕೊಳ್ಳಿ. ಇಂಜಿನೀ ಯರಿಂಗ್ ವೃತ್ತಿಪರ'ಕೋರ್ಸ್ ' ಆಗಿರುವುದರಿಂದ ಪದವಿ ಮುಗಿಸಿ ಹೊರಬರುವ ವೇಳೆಗೆ ವೃತ್ತಿಪರ ಕೌಶಲ ಹೊಂದಿರುವ ವ್ಯಕ್ತಿತ್ವವಾಗಿ ಹೊರಹೊಮ್ಮಬೇಕೆಂದು ಸಲಹೆ ನೀಡಿದರು.




ಜಾಗತಿಕ ಮಟ್ಟದಲ್ಲಿ ಮನ್ನಣೆ ಹೊಂದಿರುವ ಇಂಜಿನೀಯರಿಂಗ್ ಪುಸ್ತಕಗಳನ್ನು ಓದುವ ಅಭ್ಯಾಸ ಬೆಳೆಸಿಕೊಳ್ಳಿ. ಓದಿನ ಜೊತೆಗೆ ಅಗತ್ಯ ಕೌಶಲಗಳನ್ನು ಕಲಿಯಲು ಕೂಡ ಆದ್ಯತೆ ನೀಡಿ. ತಂಡದಲ್ಲಿ ಕೆಲಸ ಮಾಡುವ ಗುಣ ಮೈಗೂಡಿಸಿಕೊಳ್ಳಿ. ಉದ್ಯೋಗಕ್ಕೆ ಸೇರಿದ ನಂತರ ತಂಡದ ಭಾಗವಾಗಿ ಕೆಲಸ ಮಾಡುವ ಅಗತ್ಯತೆ ಎದುರಾಗಲಿದೆ ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ಫಲಿತಾಂಶ ಆಧಾರಿತ ಶಿಕ್ಷಣ, ವಿದ್ಯಾರ್ಥಿ ಕೇಂದ್ರಿತವಾಗಿ ಬೋಧನಾ-ಕಲಿಕಾ ಚಟುವಟಿಕೆಗಳನ್ನು ವಿನ್ಯಾಸಗೊಳಿಸುವ ಪರಿಕಲ್ಪನೆಯನ್ನು ಒಳಗೊಂಡಿದೆ. ತಮ್ಮ ಓದಿಗೆ ತಕ್ಕ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸಲು ಅದರ ಮೂಲಕ ಒತ್ತು ನೀಡಲಾಗಿದೆ ಎಂದು ತಿಳಿಸಿದರು.

ಮೆಕ್ಯಾನಿಕಲ್ ಇಂಜಿನೀಯರಿಂಗ್ ಪದವಿ ಪಡೆಯುವ ವಿದ್ಯಾರ್ಥಿಗಳು ಎಲ್ಲಾ ಕ್ಷೇತ್ರಗಳಲ್ಲೂ ವೃತ್ತಿ ಬದುಕು ಕಟ್ಟಿಕೊಳ್ಳಬಹುದು. ಇಂಜಿನೀಯರಿಂಗ್‌ಕ್ಷೇತ್ರಕ್ಕೆ ಭೌತಶಾಸ್ತ್ರದ ಮೂಲ ತತ್ವಗಳ ಕೊಡುಗೆ ಹೆಚ್ಚಿದೆ. ಮೂರು-ನಾಲ್ಕನೇ ಸೆಮಿಸ್ಟರ್‌ನಲ್ಲಿ ಓದುವಾಗ ಭೌತಶಾಸ್ತ್ರದ ಮೂಲ ನಿಯಮಗಳನ್ನು ಕಲಿಯಲು ಹೆಚ್ಚಿನ ಒತ್ತು ನೀಡಿ ಎಂದರು.

ಮೆಕ್ಯಾನಿಕಲ್ ಇಂಜಿನೀಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಎಜಿಲ್ ವಣ್ಣನ್ ಅವರು ಮಾತನಾಡಿ, ಮೆಕ್ಯಾನಿಕಲ್ ಇಂಜಿನೀಯರಿಂಗ್‌ಕ್ಷೇತ್ರದಲ್ಲಿ ಸಾಕಷ್ಟು ಉದ್ಯೋಗಾವಕಾಶಗಳಿವೆ. ಎಂಟನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಕಂಪನಿಗಳಲ್ಲಿ ಇಂಟರ್ನ್‌ಶಿಪ್ ಮಾಡುವ ಅವಕಾಶವಿದೆ. ಈ ವೇಳೆ ಕಲಿಯುವ ಜೊತೆಗೆ ಹಣಕೂಡ ಸಂಪಾದಿಸ ಬಹುದು. ಕಾಲೇಜಿನ ಮೆಕ್ಯಾನಿಕಲ್ ಇಂಜಿನೀಯರಿಂಗ್ ವಿಭಾಗದಲ್ಲಿ ಓದುತ್ತಿರುವ ಶೇ.90 ಕ್ಕಿಂತ ಹೆಚ್ಚು ಅಂತಿಮ ವರ್ಷದ ವಿದ್ಯಾರ್ಥಿಗಳು ಶಿಷ್ಯವೇತನದೊಂದಿಗೆ ಕಂಪನಿಗಳಲ್ಲಿ ಇಂಟರ್ನ್‌ಶಿಪ್ ಮಾಡಲು ಆಯ್ಕೆಯಾಗಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಮೆಕ್ಯಾನಿಕಲ್ ಇಂಜಿನೀಯರಿಂಗ್ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕ್ಯಾಂಪಸ್ ಸೆಲೆಕ್ಷನ್ ಮೂಲಕ ಉದ್ಯೋಗ ಪಡೆಯುತ್ತಿದ್ದಾರೆಂದು ತಿಳಿಸಿದರು.

ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ವಿಜಯ್‌ಕುಮಾರ್‌ತಿಲೆ ಅವರು ಮಾತನಾಡಿ, ಸಮಾಜಮುಖಿ ಕೆಲಸಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವ ಸಲುವಾಗಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಚಟುವಟಿಕೆ ಪಾಯಿಂಟ್‌ಗಳನ್ನು ಪರಿಚಯಿಸಿದೆ. ನಿಗದಿತ ಸಂಖ್ಯೆಯಲ್ಲಿ ಚಟುವಟಿಕೆ ಪಾಯಿಂಟ್‌ಗಳನ್ನು ಗಳಿಸದಿದ್ದರೆ ಪದವಿ ಪ್ರಮಾಣಪತ್ರ ಪಡೆಯಲು ಅರ್ಹತೆ ದೊರೆಯುವುದಿಲ್ಲ. ಪಾಯಿಂಟ್‌ಗಳನ್ನು ಗಳಿಸಲು ಎಐಸಿಟಿಇ ಸೂಚಿಸಿರುವ ಚಟುವಟಿಕೆಗಳು ನಾಯಕತ್ವಗುಣ ಬೆಳೆಸಿಕೊಳ್ಳಲು ಸಹಕಾರಿ ಎಂದರು.

ಮೆಕ್ಯಾನಿಕಲ್ ಇಂಜಿನೀಯರಿಂಗ್ ವಿಭಾಗದ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ಇತರರು ಉಪಸ್ಥಿತರಿದ್ದರು.

## ಚರ್ಚೆಯನ್ನೇ ನಡೆಸದೆ ಎರಡು ದಶಕಗಳ ಅಭಿವೃದ್ಧಿ ಬುಡಮೇಲು: ಕಾಂಗ್ರೆಸ್



• ಪ್ರಜೋದಯ ವರದಿ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ನೆಲದ ಕಾನೂನಾದ ನರೇಗಾವನ್ನು ಅಪವಿತ್ರಗೊಳಿಸಿದೆ ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿತು.

ಚರ್ಚೆಯನ್ನೇ ನಡೆಸದೆ ಎರಡು ದಶಕಗಳ ಪ್ರಗತಿಯನ್ನು ಬುಡಮೇಲು ಮಾಡಿದೆ. ಸಂಸತ್ತಿನ ಸಂಪ್ರದಾಯಗಳು ಮತ್ತು ಪ್ರಕ್ರಿಯೆ ಗಳನ್ನು ಗಾಳಿಗೆ ತೂರಿದೆ ಎಂದು ವಾಗ್ದಾಳಿ ನಡೆಸಿತು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ಯುಪಿಎ ಸರ್ಕಾರವು 2012ರಲ್ಲಿ ಜಾರಿ ಮಾಡಿದ್ದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕುರಿತ ವಿಮ ರ್ಶಾತ್ಮಕ ದಾಖಲೆಯನ್ನು ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ.

ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ನರೇಗಾ ಸಮೀಕ್ಷೆಯನ್ನು ಬಿಡುಗಡೆ ಮಾಡಿದ್ದರು. ಅದು 2008 ಮತ್ತು 2012ರ ಮಧ್ಯೆ ಕೈಗೊಂಡ 145 ಕ್ಷೇತ್ರ ಅಧ್ಯಯನಗಳ ಸಂಕಲನವಾಗಿತ್ತು. ಇದು ಈಗಲೂ ಅಧ್ಯಯನಕ್ಕೆ ಲಭ್ಯವಿದೆ ಎಂದು ಹೇಳಿದ್ದಾರೆ.

ಇದಕ್ಕೂ ಮುನ್ನ ಶನಿವಾರ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಕೇಂದ್ರ ಸರ್ಕಾರವು ನರೇಗಾ ಯೋಜನೆ ಯನ್ನು ನೆಲಸಮ ಮಾಡಿದೆ. ನೂತನ ಕಪ್ಪು ಕಾನೂನಿನ ವಿರುದ್ಧ ಹೋರಾಡಿ ಎಂದು ಕಾರ್ಯಕರ್ತರಿಗೆ ಕರೆ ನೀಡಿದ್ದರು.

ಭಾರತದ ಪ್ರಗತಿಗಾಗಿ ಅಣು ಶಕ್ತಿಯ ಸುಸ್ಥಿರ ಉತ್ಪಾದನೆ (ಎಸ್‌ಎಚ್‌ಎಎನ್‌ಟಿಐ ಶಾಂತಿಮಸೂದೆ) ಮಸೂದೆಯನ್ನು ಸಂಸತ್ತಿನಲ್ಲಿ ನಿರ್ನಾಮ ಮಾಡಲಾಗಿದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಮತ್ತವರ ಸ್ನೇಹಿತನ ನಡುವಣ ಶಾಂತಿ ಪುನಃಸ್ಥಾಪನೆಗಾಗಿ ಈ ಮಸೂದೆಯನ್ನು ನೆಲಸಮ ಮಾಡಲಾಗಿದೆ ಎಂದು ಆರೋಪಿಸಿದರು. ಅದಾನಿ ಸಮೂಹವು ಪರಮಾಣು ಇಂಧನ ಕ್ಷೇತ್ರಕ್ಕೆ ಪ್ರವೇಶಿಸುವ ಚಿಂತನೆಯಲ್ಲಿದೆ ಎಂಬ ಮಾಧ್ಯಮ ವರದಿ ಉಲ್ಲೇಖಿಸಿ ಅವರು ಈ ಹೇಳಿಕೆ ನೀಡಿದರು.

## ಗ್ರಾಮೀಣ ಮಕ್ಕಳಿಗೆ ಆಂಗ್ಲ ಶಿಕ್ಷಣ ಅವಶ್ಯ

ಪ್ರಜೋದಯ ವರದಿ

**ಅರಕಲಗೂಡು:** ಗ್ರಾಮೀಣ ಪ್ರದೇಶದಲ್ಲಿ ಕಲಿಯುವ ಮಕ್ಕಳಿಗೆ ಆಂಗ್ಲ ಶಿಕ್ಷಣ ಅತ್ಯವಶ್ಯಕವೆಂದು ಗ್ರಾಮ ಪಂಚಾಯಿತಿ ಸದಸ್ಯ ಸಂತೋಷ್ ಅವರು ಹೇಳಿದರು.

ತಾಲ್ಲೂಕಿನ ಶಣವಿನಕುಪ್ಪೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ವರ್ಗಾವಣೆಗೊಂಡ ರೌಷನ್ ಅರ ಅವರಿಗೆ ಏರ್ಪಡಿಸಿ ಬೀಳ್ಕೊಡುಗೆ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಗರ ಪ್ರದೇಶದ ಮಕ್ಕಳಿಗೆ ಹೋಲಿಸಿದರೆ ಹಳ್ಳಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ಇಂಗ್ಲೀಷ್ ಶಿಕ್ಷಣದಿಂದ ವಂಚಿತರಾಗುವಂತಾಗಿದೆ. ಆದರಿಂದ ಕೆಲ ಪಾಲಕರು ತಮ್ಮ ಮಕ್ಕಳನ್ನು ನಗರ ಪ್ರದೇಶದ ಕಾನ್ವೆಂಟ್‌ಗಳಿಗೆ ಮಕ್ಕಳನ್ನು ಕಳುಹಿಸುವಂತಾಗಿದೆ. ಪರಿಣಾಮವಾಗಿ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಕೊರತೆ ಉಂಟಾಗಿ ಮುಚ್ಚುವಂತಾಗಿದೆ ಎಂದರು.

ಶಿಕ್ಷಕಿಯಾಗಿ ನೇಮಕವಾಗಿ ಮೂರು ವರ್ಷಗಳಿಂದ ಸೇವೆ ಸಲ್ಲಿಸಿದ ರೌಷನ್ ಅವರು ಮಕ್ಕಳಿ ಗೆ ಇಂಗ್ಲೀಷ್ ಕಲಿಕೆಗೆ ಒತ್ತು ನೀಡಿ ಗುಣಮಟ್ಟದ ಶಿಕ್ಷಣ ನೀಡಿದ್ದರಿಂದ ಶಾಲೆಯಲ್ಲಿ ಮಕ್ಕಳ ಹಾಜರಾತಿಯಲ್ಲಿ ಹೆಚ್ಚಳವಾಗಿದೆ. ಇಲ್ಲವಾದರೆ ಪಟ್ಟಣಕ್ಕೆ ಸಮೀಪವಿರುವ




ಈ ಶಾಲೆಯಲ್ಲಿಯೂ ಮಕ್ಕಳ ಕೊರತೆ ಉಂಟಾಗುತ್ತಿತ್ತು.ಶಾಲೆಯಲ್ಲಿ ಇಂಗ್ಲೀಷ್ ಶಿಕ್ಷಕಿ ಇಲ್ಲವಾಗಿದ್ದು, ಇದೇ ಶಾಲೆಗೆ ರೌಷನ್ ಅವರನ್ನು ಮರು ವರ್ಗಾಯಿಸಬೇಕು. ಇಂಗ್ಲೀಷ್ ಕಲಿಕೆಗೆ ಹೆಚ್ಚು ಆದ್ಯತೆ ನೀಡುವ ಮೂಲಕ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗ ಳನ್ನು ಉಳಿಸಬೇಕೆಂದು ಮನವಿ ಮಾಡಿದರು.

ಶಿಕ್ಷಕಿ ರೌಷನ್ ಅರ ಗುರು ವಂದನೆ ಸ್ವೀಕರಿಸಿ ಮಾತನಾಡಿದ ಅವರು, ಮಕ್ಕಳ ಕಲಿಕೆ ಜೊತೆಗೆ ಶಿಸ್ತು, ಸಂಯಮ ರೂಢಿಸಿಕೊಂಡು ಉತ್ತಮ ಸಂಸ್ಕಾರ ಪ್ರಾಥಮಿಕ ಹಂತದಿಂದಲೇ ಸಿಗುವಂತಾಗಬೇಕು. ಅಂತಹ ಮಕ್ಕಳು ಭವಿಷ್ಯದಲ್ಲಿ ಉನ್ನತ ಸಾಧನೆ ಮಾಡಲು ಸಹಕಾರಿಯಾಗುತ್ತದೆ. ಈ ಹಳ್ಳಿ ಶಾಲೆಯಲ್ಲಿ ಇಂಗ್ಲೀಷ್ ಕಲಿಕೆಗೆ ಹೆಚ್ಚು ಒತ್ತು ನೀಡಿರುವ ಕುರಿತು ಹಂಚಿದ ವಿಡಿಯೋಗಳಿಗೆ ರಾಜ್ಯ ವ್ಯಾಪ್ತಿ ಮೆಚ್ಚುಗೆ ವ್ಯಕ್ತವಾಯಿತು ಎಂದು ತಿಳಿಸಿದರು.

ಎಸ್.ಡಿ.ಎಂ.ಸಿ. ಅಧ್ಯಕ್ಷ ಮಂಜುನಾಥ್, ಮುಖ್ಯ ಶಿಕ್ಷಕಿ ಯಾಸ್ಮೀನ್ ತಾಜ್, ಸಹ ಶಿಕ್ಷಕರಾದ ಸಾಗರ್, ಪರಮೇಶ್, ದಿವ್ಯಮಣಿ, ಅಂಗನವಾಡಿ ಶಿಕ್ಷಕಿ ಮಂಜುಳಾ, ಕುಮಾರ್, ಗ್ರಾಮಸ್ಥರು ಇದ್ದರು.

## ಸಿಮೆಂಟ್ ಮಂಜು ಹುಟ್ಟುಹಬ್ಬ : ಆರೋಗ್ಯ ಶಿಬಿರ

• ಪ್ರಜೋದಯ ವರದಿ

**ಸಕಲೇಶಪುರ:** ಶಾಸಕ ಸಿಮೆಂಟ್ ಮಂಜು ಅವರ ಹುಟ್ಟುಹಬ್ಬದ ಅಂಗವಾಗಿ ಡಿ.23ರ ಮಂಗಳವಾರ ಪಟ್ಟಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಶಾಸಕರ ಅಭಿಮಾನಿ ಬಳಗದ ವಳಲಹಳ್ಳಿ ಅಶ್ವಥ್ ಅವರು ತಿಳಿಸಿದ್ದಾರೆ.

ಪಟ್ಟಣದ ಪತ್ರಕರ್ತರ ಸಂಘದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತ ನಾಡಿದ ಅವರು, ಸಾಮಾನ್ಯವಾಗಿ ರಾಜಕಾರಣಿಗಳ ಹುಟ್ಟುಹಬ್ಬವನ್ನು ಫ್ಲೆಕ್ಸ್‌ಗಳು, ಹಾರತುರುಗಳು ಹಾಗೂ ಕೇಕ್‌ಕಟ್ ಮಾಡುವ ಮೂಲಕ ಆಚರಿಸಲಾಗುತ್ತದೆ. ಆದರೆ ಕ್ಷೇತ್ರದ ಸಾಮಾನ್ಯ ಜನರ ನಡುವೆ ಪಕ್ಷಾತೀತವಾಗಿ ಕೆಲಸ ಮಾಡುತ್ತಿರುವ ಶಾಸಕ ಸಿಮೆಂಟ್ ಮಂಜು ಅವರ ಹುಟ್ಟುಹಬ್ಬವನ್ನು ಸಾರ್ವಜನಿಕರಿಗೆ ಉಪಯೋಗವಾಗುವ ರೀತಿಯಲ್ಲಿ ವಿಭಿನ್ನವಾಗಿ ಹಾಗೂ ಸರಳವಾಗಿ ಆಚರಿ ಸುವ ಉದ್ದೇಶದಿಂದ ಉಚಿತ ಆರೋಗ್ಯ ಶಿಬಿರವನ್ನು ಹಮ್ಮಿ ಕೊಳ್ಳಲಾಗಿದೆ ಎಂದು ಹೇಳಿದರು.

ಪ್ರತಿಯೊಬ್ಬರಿಗೂ ಆರೋಗ್ಯವೇ ಅತ್ಯಂತ ಮುಖ್ಯವಾಗಿರುವುದರಿಂದ ಶಿಬಿರದಲ್ಲಿ ಆರೋಗ್ಯ ತಪಾಸಣೆ ನಡೆಸುವುದರ ಜೊತೆಗೆ ಔಷಧಿಗಳನ್ನು ಉಚಿತವಾಗಿ ವಿತರಿಸಲಾಗುವುದು. ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ (ಹಿಮ್ಸ್) ಸಹಯೋಗದೊಂದಿಗೆ ಶಿಬಿರ ಆಯೋಜಿಸಲಾಗಿದೆಂದು ತಿಳಿಸಿದರು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶಂಭುನಾಥ ಸ್ವಾಮೀಜಿ, ಕಾಸರಹಳ್ಳಿ ಹಿರೇಮಠದ ಸದಾಶಿವ ಶಿವಾಚಾರ್ಯ ಸ್ವಾಮೀಜಿ, ತೆಂಗಲ ಗೂಡು ಮಠದ ಚನ್ನಕೇಶವ ಶಿವಾ ಚಾರ್ಯ ಸ್ವಾಮೀಜಿ,




ಕಿರಿಕೊಡ್ಲಿ ಮಠ ಸದಾಶಿವ ಸ್ವಾಮೀಜಿ, ಶಾಂತವೀರ ಮಲ್ಲಿಕಾರ್ಜುನ ಸ್ವಾಮೀಜಿ, ಸಂಕ್ಲಾಪುರ ಕಿರಿಯ ಸ್ವಾಮೀಜಿಗಳ ಸಾನಿಧ್ಯದಲ್ಲಿ ಉದ್ಘಾಟಿಸಲಾಗುವುದೆಂದು ಹೇಳಿದರು.

ಆರೋಗ್ಯ ಶಿಬಿರದಲ್ಲಿ ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಫಿಸಿಷಿ ಯನ್‌ಗಳು, ಶಸ್ತ್ರಚಿಕಿತ್ಸಾ ವಿಭಾಗದ ತಜ್ಞರು, ನೇತ್ರ ವೈದ್ಯರು, ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞರು, ಮನೋವೈದ್ಯರು, ದಂತ ವೈದ್ಯರು, ಚರ್ಮರೋಗ ತಜ್ಞರು, ಕೀಲು ಮತ್ತು ಮೂಳೆ ತಜ್ಞರು, ಇಎನ್‌ಟಿ ಹಾಗೂ ಮಕ್ಕಳ ತಜ್ಞರು ಸೇವೆ ಸಲ್ಲಿಸಲಿದ್ದಾ ರೆಂದು ಮಾಹಿತಿ ನೀಡಿದರು.

ಸಾ.ಸು.ವಿಶ್ವನಾಥ್ ಅವರು ಮಾತನಾಡಿ, ಆರೋಗ್ಯ ಶಿಬಿರವನ್ನು ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ 23ರ ಮಂಗಳವಾರ ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಆಯೋಜಿಸ ಲಾಗಿದೆ. ತಾಲೂಕಿನ ನಾಗರಿಕರು ಸದುಪಯೋಗ ಪಡಿಸಿ ಕೊಳ್ಳಬೇಕೆಂದು ಮನವಿ ಮಾಡಿದರು.

ಶಾಸಕರ ಅಭಿಮಾನಿ ಬಳಗದ ಮಧು (ಬೊಮ್ಮನಕೆರೆ), ನಿಖಿಲ್ (ಹಲುಸುಲಿಗೆ), ಮೇಘರಾಜ್ (ದೇಖಲ) ಹಾಗೂ ಜೈಶಂಕರ್ ಉಪಸ್ಥಿತರಿದ್ದರು.

## ತಾಲ್ಲೂಕು ಮಟ್ಟದ ಕಲಾ ಕುಂಚ ಚಿತ್ರಕಲಾ ಸ್ಪರ್ಧೆ

• ಪ್ರಜೋದಯ ವರದಿ

**ಬೇಲೂರು:** ಅಳಿವಿನಂಚಿನಲ್ಲಿರುವ ವನ್ಯ ಜೀವಿ, ಪ್ರಕೃತಿ ಹಾಗೂ ನಮ್ಮ ಸಂಸ್ಕೃತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡುವಂತಹ ಕಾರ್ಯಾಗಾರ ಹಮ್ಮಿಕೊಳ್ಳಬೇಕೆಂದು ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಬಿ.ವಿ.ಮಲ್ಲಿಕಾರ್ಜುನಯ್ಯ ಅವರು ತಿಳಿಸಿದರು.

ಪಟ್ಟಣದ ಪೂರ್ಣಪ್ರಜ್ಞ ಶಾಲೆಯಲ್ಲಿ ಏರ್ಪಡಿಸಿದ್ದ ತಾಲ್ಲೂಕು ಮಟ್ಟದ ಕಲಾ ಕುಂಚ ಚಿತ್ರಕಲಾ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರಾಣಿಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ. ನಮ್ಮ ಕಾಡು, ನಮ್ಮ ಜೀವ, ಸೇವ್ ಫಾರೆಸ್ಟ್- ಸೇವ್ ಅನಿಮಲ್ಸ್ ಎಂಬ ಉದ್ದೇಶದೊಂದಿಗೆ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ. ವಿದ್ಯಾರ್ಥಿಗಳು ಈಗಿನಿಂದಲೇ ಪರಿಸರ ಸಂರಕ್ಷಣೆ ಹಾಗೂ ವನ್ಯ ಪ್ರಾಣಿಗಳ ಬಗ್ಗೆ ಸಹಾನುಭೂತಿ ಬೆಳೆಸಿಕೊಳ್ಳಬೇಕೆಂದರು.

ಸಾಲುಮರದ ತಿಮ್ಮಕ್ಕನವರು ಪ್ರಶಸ್ತಿ, ಪದವಿ ಆಸೆಯಿಂದ ಸಾಲು




ಮರಗಳನ್ನು ನೆಟ್ಟು ಬೆಳೆಸಲಿಲ್ಲ. ನಿಸ್ವಾರ್ಥ ಮನೋಭಾವದಿಂದ ಎಲ್ಲರಿಗೂ ಉಪಯೋಗವಾಗಲಿ ಎಂದು ಗಿಡಗಳನ್ನು ಪೋಷಿಸಿದರು. ಅವರ ಪರಿಸರ ಪ್ರೇಮ ಮನೆಮಾತಾಗಿ ಪದ್ಮಶ್ರೀ, ನಾಡೋಜ ಪ್ರಶಸ್ತಿ, ಹಾಗೂ ರಾಜ್ಯ ಸರ್ಕಾರದಲ್ಲಿ ಪರಿಸರ ರಾಯಭಾರಿ ಅಂತಹ ಉನ್ನತ ಉದ್ಯೋಗಗಳು ಹುಡುಕಿ ಕೊಂಡು ಬಂದವು. ಅದೇ ರೀತಿ ನಾವು ಕೂಡ ಪರಿಸರ ಹಾಗೂ ಪ್ರಾಣಿಗಳ ಸಂರಕ್ಷಣೆಗೆ ಬದ್ಧರಾಗಬೇಕು ಎಂದರು.

ಜನಮಿತ್ರ ಪತ್ರಿಕೆ ಸಂಪಾದಕ ಸಿ.ಆರ್.ನವೀನ್ ಅವರು ಮಾತನಾಡಿ, ಮಕ್ಕಳಿಗೆ ಈಗ ನಿಂದಲೇ ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಚಿತ್ರಕಲಾ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಪರಿಸರ ಹಾಗೂ ವನ್ಯಜೀವಿಗಳ ಬಗ್ಗೆ ತಮ್ಮ ಮನಸ್ಸಿನಲ್ಲಿರುವ ಭಾವನೆಗಳನ್ನು ಚಿತ್ರ ಬಿಡಿಸುವುದರ ಮೂಲಕ ಅಭಿವ್ಯಕ್ತಗೊಳಿಸಿ ಪ್ರಕೃತಿಯ ಬಗ್ಗೆ ಪ್ರೀತಿ ಬೆಳೆಸಿಕೊಳ್ಳಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ ಅವರು ಮಾತನಾಡಿ, ಕನ್ನಡ ದಿನ ಪತ್ರಿಕೆಗಳು ರಾಜಕೀಯ, ಕ್ರೈಂ, ಸಿನಿಮಾ ವಿಚಾರಗಳಿಗೆ ಮಾತ್ರ ಸೀಮಿತವಾಗದೆ ಮಕ್ಕಳಲ್ಲಿ ಕಾಡು ಪ್ರಾಣಿ ಹಾಗೂ ಪರಿಸರದ ಬಗ್ಗೆ ಅರಿವು ಮೂಡಿಸಲು ಚಿತ್ರಕಲೆ ಸ್ಪರ್ಧೆಯನ್ನು ಏರ್ಪಡಿಸಿರುವುದು ಸ್ವಾಗತಾರ್ಹ. ಅದರಿಂದ ಮಕ್ಕಳಲ್ಲಿ ಏಕಾಗ್ರತೆಯ ಜೊತೆಗೆ ತಮ್ಮ ಮನಸ್ಸಿನಲ್ಲಿರುವ ಭಾವನೆಗಳನ್ನು ವ್ಯಕ್ತಪಡಿಸಲು ಸಹಕಾರಿಯಾಗಿದೆಂದು ಹೇಳಿದರು.

ಸುವರ್ಣ ವಾಹಿನಿಯ ಜಿಲ್ಲಾ ವರದಿಗಾರ ಹರೀಶ್, ಪೂರ್ಣಪ್ರಜ್ಞ ಶಾಲೆಯ ಪ್ರಾಂಶುಪಾಲ ಪ್ರಶಾಂತ್ ಕುಮಾರ್, ಜಿಲ್ಲಾ ಪತ್ರಕರ್ತರ ಸಂಘದ ನಿರ್ದೇಶಕ ಮಲ್ಲೇಶ್, ಪತ್ರಕರ್ತರಾದ ರಾಘವೇಂದ್ರ ಹೊಳ್ಳ, ಬಿ.ಎನ್.ಗಣೇಶ್, ತಾಲೂಕು ಪತ್ರಕರ್ತರ ಸಂಘದ ಕಾರ್ಯದರ್ಶಿ ಬಿ.ಬಿ.ಶಿವರಾಜ್, ಕನ್ನಡಸಾಹಿತ್ಯ ಪರಿಷತ್ ಅಧ್ಯಕ್ಷ ಮಾನ ಮಂಜೇಗೌಡ ಉಪಸ್ಥಿತರಿದ್ದರು.

ಇಪ್ಪತ್ತಕ್ಕೂ ಹೆಚ್ಚು ಶಾಲೆಗಳಿಂದ 80 ವಿದ್ಯಾರ್ಥಿಗಳು ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.

### ಕಾಚೇನಹಳ್ಳಿ ಏತನೀರಾವರಿಯಿಂದ ದಂಡಿಗನಹಳ್ಳಿ ಹೋಬಳಿ ಸಂಪನ್ನ

## ದೊಡ್ಡಕರಡೇವು ದೊಡ್ಡಕೆರೆಗೆ ಬಾಗಿನ ಅರ್ಪಣೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕಾಚೇನಹಳ್ಳಿ ಏತನೀರಾವರಿ ಯೋಜನೆಯಿಂದ ತಾಲ್ಲೂಕಿನ ದಂಡಿಗನ ಹಳ್ಳಿ ಹೋಬಳಿಯ ಸಾಕಷ್ಟು ಗ್ರಾಮಗಳ ಅಂತರ್ಜಲ ವೃದ್ಧಿಯಾಗಿದೆ ಎಂದು ಕುಂದೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಡಿ.ಎಲ್.ಮಧು ಅವರು ತಿಳಿಸಿದರು.

ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ದೊಡ್ಡಕರಡೇವು ಗ್ರಾಮದ ದೊಡ್ಡಕೆರೆ ಹಾಗೂ ಬೇರಿಕಟ್ಟೆ ಭರ್ತಿಯಾದ ಹಿನ್ನೆಲೆಯಲ್ಲಿ ಬಾಗಿನ ಅರ್ಪಿಸಿ ಮಾತನಾಡಿದ ಅವರು, ಶಾಸಕರಾದ ಹೆಚ್.ಡಿ.ರೇವಣ್ಣನವರ ಶ್ರಮದಿಂದ ದಂಡಿಗನಹಳ್ಳಿ ಹೋಬಳಿಯ ಸಾಕಷ್ಟು ಗ್ರಾಮಗಳ ಕೆರೆಗೆ ಹೇಮಾವತಿ ನದಿ ನೀರು ಹರಿಯುತ್ತಿದೆ, ಅದರಿಂದ ಸಾವಿರಾರು ಮಂದಿ ರೈತರು ನೆಮ್ಮದಿಯಾಗಿ ಬದುಕು ಕಟ್ಟಿಕೊಂಡಿದ್ದಾರೆ ಎಂದರು.

ಕಾಚೇನಹಳ್ಳಿ ಮೊದಲ ಹಂತದ ಏತನೀರಾವರಿಯಿಂದ ರಾಷ್ಟ್ರೀಯ ಹೆದ್ದಾರಿ ದಾಟಲು ಆಗಲಿಲ್ಲ, 2ನೇ ಹಂತದಿಂದ ಅಣ್ಣೇನಹಳ್ಳಿ, ಅಪ್ಪೇನಹಳ್ಳಿವರೆಗೆ ನೀರು ಹರಿದು ಇದೀಗ ದೊಡ್ಡ ಕರಡೇವು ಗ್ರಾಮದ ಕೆರೆ ಭರ್ತಿಯಾಗಿದೆ. ಈ ಮೂಲಕ ಮೂರನೇ ಹಂತದ ಏತನೀರಾವರಿ ಕಾಮಗಾರಿ ಮುಗಿದ ಮೇಲೆ ಅರಸೀಕೆರೆ ತಾಲ್ಲೂಕಿನ ಗಂಡಸಿ ಹೋಬಳಿಯ ಸಾಕಷ್ಟು ಹಳ್ಳಿಗಳಿಗೂ ಇದರ ಲಾಭವಾಗುತ್ತದೆ. ಏತನೀರಾವರಿಗಳು



ಬರಡು ಭೂಮಿಗೆ ಜೀವಜಲ ವಾಗಿದೆ, ಕೃಷಿ ಚಟುವಟಿಕೆ, ಹೈನುಗಾರಿಕೆ ಮಾಡುವುದರ ಜೊತೆಯಲ್ಲಿ ತೋಟಗಾರಿಕೆಗೆ ಅನುಕೂಲವಾಗುತ್ತಿವೆಂದರು.

ದೊಡ್ಡಕರಡೇವು ಗ್ರಾಮದ ಕೆರೆ ಭರ್ತಿಯಾದ ಮೇಲೆ ಹೆಚ್ಚುವರಿ ನೀರು ಮದಲಪುರ, ತಿಮ್ಲಾಪುರ, ಯಲಿಯೂರು, ಬರಗೂರು, ಗೆಜ್ಜಗಾರನಹಳ್ಳಿ, ಕತ್ತರಿಘಟ್ಟ ಗ್ರಾಮದ ಕೆರೆಗಳಿಗೆ ಹರಿಯುವ ಮೂಲಕ ಸಾಕಷ್ಟು ಕೃಷಿ ಭೂಮಿಯಲ್ಲಿ ಕೊಳವೆ ಬಾವಿ ಅಂತರ್ಜಲ ವೃದ್ದಿಯಾ ಗುತ್ತಿದೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಮಲ್ಲೇಶ್, ಶಿವನಂಜಮ್ಮ, ನಂಜಪ್ಪ, ಎಪಿಎಂಸಿ ಮಾಜಿ ನಿರ್ದೇಶಕ ಸತೀಶ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ರವೀಶ್, ಕುಂದೂರು ಪಿಎಸಿಸಿಎಸ್ ಅಧ್ಯಕ್ಷ ಹರೀಶ್, ನಿರ್ದೇಶಕರಾದ ಜಯಲಕ್ಷ್ಮೀ, ಸತೀಶ್, ಗ್ರಾಮ ಅರಣ್ಯ ಸಮಿತಿ ಅಧ್ಯಕ್ಷ ವೆಂಕಟರಮಣಸ್ವಾಮಿ, ಪಿಎಸಿಸಿಎಸ್ ಮಾಜಿ ಅಧ್ಯಕ್ಷ ಮಂಜಣ್ಣ, ಮುಖಂಡರಾದ ದಿನೇಶ್, ನಾಗೇಂದ್ರ, ಪರಮೇಶ್, ವಿಕಾಸ್ ಮೊದಲಾದವರು ಉಪಸ್ಥಿತರಿದ್ದರು.

